ಜನಪದ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೧ ಜೂನ್ - ೨೦೧೧ ಸಂಚಿಕೆ - ೧೧



ಒಬಾಮಾ - ಒಸಾಮಾ ಕದನ ಅಂತ್ಯ ಎಂದು ಮತ್ತು ಹೇಗೆ ?



ಜನಪದ ವಿಚಾರದಲ್ಲಿ

ಜೂನ್ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೧೧
ಸಂಪುಟ - ೧೧
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಕರ್ಮಯೋಗಿಯ ಗೀತೆ

ಭಜನ ಪೂಜನ ಸಾಧನಾ, ಆರಾಧನಾ
ಬಿಡು ಸಮಸ್ತವ ಸುಮ್ಮನೆ,
ಬಂಧ ದ್ವಾರದ ಗುಡಿಯಗೂಡಲಿ
ಯಾರನರಸುವೆ ಬಿಮ್ಮನೆ?
ಮನದಿ ಕವಿದಿರೆ ಕತ್ತಲೆ
ಗುಪ್ತ ಪೂಜೆಯು ಯಾರಿಗೆ?
ಕಣ್ಣು ತೆರೆದಿಗೋ ನೋಡೆಲೆ
ದೇವನಿಲ್ಲವು ಎದುರಿಗೆ.

ಆತನಿರುವನು ಗೊಡ್ಡು ಭೂಮಿಯನುಳುತಿಹ
ರೈತರೆಡೆಯಲಿ ಬಳಲುತ
ಕಲ್ಲುಬಂಡೆಯನೊಡೆವ ಒಡ್ಡರ
ಸಂಗದಲಿ ತಾ ಸೇರುತಾ
ಮಗುಟ ತೆಗೆದೆಸೆ ಮೂಲೆಗೆ
ಅಂತೆ ಬಾ ನೀ ಮಣ್ಣಿಗೆ
ಮಲಿನ ವಸ್ತ್ರದಿ ಬಯಲಿಗೆ
ಎಲರು ಮಳೆ ಬರಿ ಬಿಸಿಲಿಗೆ,

ಮುಕ್ತಿಯೇ, ಹಾ ಮೂರ್ಖ, ಮುಕ್ತಿಯದೆಲ್ಲಿದೆ?
ಸರ್ವ ಸೃಷ್ಟಿಯ ತಂದೆಯೇ
ಮಂದಿಯೊಂದಿಗೆ ಹೊಂದಿಯೇ
ಕಟ್ಟಿಕೊಂಡಿಹ ಕಾಯಕ;
ಮಂತ್ರ ಜಪ ತಪ ಬಿಟ್ಟು ಬಾ,
ದೀಪಧೂಪವ ತೊರೆದು ಬಾ,
ವಸ್ತ್ರ ಹರಿದರು ಬೆವರಲಿ
ಕಾಣು ದೇವನವನಿರುವಲಿ.

– *ರವೀಂದ್ರನಾಥ ಟಾಗೋರ್*

ವಿಚಾರ ದೀಪ್ತಿ

ಐದು ವರ್ಷಗಳ ಹಿಂದೆ ಮಂಗಳೂರು ಎಸ್‌ಇಝಡ್ ಸ್ಥಾಪನೆಗಾಗಿ ಸುಮಾರು ೨,೦೦೦ ಎಕರೆಯಷ್ಟು ಭೂಮಿ ಸ್ವಾಧೀನಪಡಿಸಲಾಯಿತು. ಭೂಮಿ ಕಳೆದುಕೊಂಡವರಿಗೆ ಎಸ್‌ಇಝಡ್‌ನಲ್ಲಿ ಉದ್ಯೋಗ ನೀಡುವುದಾಗಿ ಭರವಸೆ ನೀಡಲಾಗಿತ್ತು. ತಲೆತಲಾಂತರಗಳಿಂದ ತಾವು ಬೆವರು ಸುರಿಸಿ ಶ್ರಮಿಸಿದ ಭೂಮಿ ತಮ್ಮಿಂದ ಕೈತಪ್ಪುತ್ತಿದ್ದರೂ, ಮಕ್ಕಳಿಗಾದರೂ ಒಳ್ಳೆಯ ಉದ್ಯೋಗ, ಕೈತುಂಬಾ ಸಂಬಳ ಸಿಗಬಹುದಲ್ಲಾ ಎಂದು ಭಾವಿಸಿದ ಕುಟುಂಬದ ಹಿರಿಯರು ಭೂಮಿ ಬಿಟ್ಟುಕೊಡಲು ಯಾವುದೇ ತಕರಾರು ಮಾಡಲಿಲ್ಲ.

ಗ್ರೆಗೋರಿ ಪತ್ರಾವೋ ಎಂಬ ರೈತರೊಬ್ಬರು ಮಾತ್ರ ಯಾವುದೇ ಕಾರಣಕ್ಕೂ ತನ್ನ ಕೃಷಿ ಭೂಮಿಯನ್ನು ನೀಡುವುದಿಲ್ಲ ಎಂದು ದಿಟ್ಟವಾಗಿ ಹೋರಾಡಿ, ಭೂಸ್ವಾಧೀನಕ್ಕೆ ತೀವ್ರ ಪ್ರತಿರೋಧವೊಡ್ಡಿದರು. ಆದರೆ, ಹೈಕೋರ್ಟ್ ತೀರ್ಪು ಇವರ ವಿರುದ್ಧವಾಗಿ ಬಂದು, ಮರುದಿನವೇ ಎಸ್‌ಇಝಡ್‌ನವರು ಪೊಲೀಸರ ಪ್ರಬಲ ರಕ್ಷಣೆಯಲ್ಲಿ ಭೂಮಿಯನ್ನು ವಶಪಡಿಸಿಕೊಂಡರು.

ಪಟ್ಟುಬಿಡದ ಗ್ರೆಗೋರಿ ಪತ್ರಾವೋ, ಜಿಲ್ಲಾಧಿಕಾರಿಗಳ ಕಚೇರಿ ಎದುರು ಅನಿರ್ದಿಷ್ಟಾವಧಿ ಸತ್ಯಾಗ್ರಹ ಮಾಡಿದಾಗ ಇದಕ್ಕೆ ಭಾರೀ ಜನಬೆಂಬಲವೂ ವ್ಯಕ್ತವಾಯಿತು. ಕೊನೆಗೆ ಮುಖ್ಯಮಂತ್ರಿಗಳೇ ಮಧ್ಯಪ್ರವೇಶ ಮಾಡಿ, ಮೈಸೂರು ಪ್ರಾದೇಶಿಕ ಆಯುಕ್ತರನ್ನು ಸ್ಥಳಕ್ಕೆ ಕಳುಹಿಸಿ ರೈತನ ಅಹವಾಲು ಆಲಿಸಬೇಕಾಯಿತು. ಆದರೂ ಪ್ರಬಲ ಬಂಡವಾಳಶಾಹಿಯೆದುರು ಹೋರಾಟವನ್ನು ಮುಂದುವರಿಸಲಾಗದೆ ರೈತ ಕೊನೆಗೂ ಇತ್ತೀಚೆಗೆ ಶರಣಾಗಿ, ತನ್ನ ಹೋರಾಟ ಕೈಬಿಡುವುದಾಗಿ ತಿಳಿಸಿದ್ದು, ಬೇರೆಲ್ಲಾದರೂ ಕೃಷಿ ಭೂಮಿಯನ್ನು ನೀಡುವಂತೆ ಕೋರಿದ್ದಾರೆ.

ಇದು ಕೈಗಾರಿಕೆಗಳಿಗಾಗಿ ಭೂಮಿ ಕಳೆದುಕೊಂಡವರ ಪರಿಸ್ಥಿತಿ. ಭೂಸ್ವಾಧೀನ ಪಡಿಸುವಾಗ ಉದ್ಯೋಗ ನೀಡುತ್ತೇವೆಂಬ ಸರ್ಕಾರದ ಭರವಸೆಯನ್ನು ನಂಬಿದರೆ ಇದೇ ಗತಿ. ಒಟ್ಟಿನಲ್ಲಿ ತಲೆತಲಾಂತರಗಳಿಂದ ಬೆವರು ಸುರಿಸಿ ಶ್ರಮಿಸುತ್ತಾ ಬಂದಿದ್ದ ಭೂಮಿಯೂ ಇಲ್ಲ, ಅತ್ತ ಉದ್ಯೋಗವೂ ಇಲ್ಲ. ನಿರ್ವಸಿತರಿಗಾಗಿ ಮನೆ ನಿರ್ಮಿಸಲು ದೊರೆತ ೫-೧೦ ಗುಂಟೆ ಜಾಗದಲ್ಲಿ ಕುಳಿತು ಆಕಾಶದತ್ತ ದೃಷ್ಟಿ ಹಾಯಿಸುವುದೇ ಕೊನೆಗೆ ಇರುವ ಹಾದಿ.

- ಬಿ. ಅಬ್ದುಲ್ ಖಾದರ್, ಅಂಗರಗುಂಡಿ

ಒಬಾಮಾ-ಒಸಾಮಾ ಕದನ ಅಂತ್ಯ ಎಂದು ಮತ್ತು ಹೇಗೆ?

- ಸುರೇಂದ್ರ ಕೌಲಗಿ

ನಾವು ಅಬ್ದುಲ್ ಗಫಾರ್ ಖಾನರನ್ನು 'ಗಡಿನಾಡ ಗಾಂಧೀ' ಎಂಬುದಾಗಿ ಕರೆಯುತ್ತೇವೆ. ಅವರು ದೇಶ ಸೇವಕರಿದ್ದಾರೆ, ವಿಶ್ವದ ಸೇವಕರಿದ್ದಾರೆ. ಅವರು ಪಾಕಿಸ್ತಾನದ ಸ್ನೇಹಿತರೂ ಆಗಿದ್ದಾರೆ, ಹಿಂದುಸ್ತಾನದ ಸ್ನೇಹಿತರೂ ಆಗಿದ್ದಾರೆ, ಅಂತೆಯೇ ಇಡೀ ವಿಶ್ವದ ಸ್ನೇಹಿತರೂ ಸಹ. ಅವರು ಕಾರಾಗೃಹದಲ್ಲಿ ಇರಬೇಕಾಯಿತು. ಈ ವಿಷಯದಲ್ಲಿ ನನಗೆ ದುಃಖವೆನಿಸಲಿಲ್ಲ. ಏಕೆಂದರೆ ಅವರು ಈ ತಪಸ್ಸಿನ ಕಾರಣದಿಂದ ಹಿಂದುಳಿದ ಎಲ್ಲರ ಮನಸ್ಸೂ ಒಂದಲ್ಲ ಒಂದು ದಿನ ಒಂದಾಗಲಿದೆ. ದೇವರು ಅವರ ತಪಸ್ಸನ್ನು ಸಫಲ ಮಾಡುವನು. ಈ ಬಗ್ಗೆ ನನಗೆ ಸಂದೇಹವಿಲ್ಲ. ಅಲ್ಲದೆ, ಈ ಅಣು ಯುಗದಲ್ಲಿ ತಥಾಕಥಿತ ರಾಜಕಾರಣದ ಕಾಲ ಮುಗಿಯಿತೆಂದೂ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಆಧ್ಯಾತ್ಮದ ಆಧಾರದ ಮೇಲೆಯೇ ದೊರೆಯಲು ಸಾಧ್ಯವೆಂದು ನನಗೆ ದೃಢವಾಗಿ ಅನ್ನಿಸುತ್ತಿದೆ. - **ವಿನೋಬಾ.**

ಏಪ್ರಿಲ್ ೧೧ ಮುಯ್ಯಿಗೆ ಮುಯ್ಯಿ, ಸೇಡಿಗೆ ಸೇಡು, ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು ಎಂಬ ರಾಕ್ಷಸನೀತಿ ಆಚರಣೆಯಾದ ದಿನ. ಅಲ್ಲದೆ, ಇಪ್ಪತ್ತೊಂದನೇ ಶತಮಾನದ ಜಾಗತಿಕ ಅಶಾಂತಿಗೆ ಬೀಜ ಬಿತ್ತಿದ ದಿನ. ನಾಗರಿಕತೆಯನ್ನು ಅನಾಗರಿಕತೆಯತ್ತ ಕೊಂಡೊಯ್ದ ಸಂಕೇತದ ದಿನ. ಜಗತ್ತಿನ ಎರಡು ದೊಡ್ಡ ಧರ್ಮಗಳ ಪ್ರವರ್ತಕರಾದ ಏಸು ಮತ್ತು ಹಜರತ್ ಮಹಮ್ಮದರ ಬೋಧನೆಗಳಿಗೆ ಆಯಾ ಮತದ ಅನುಯಾಯಿಗಳು ದ್ರೋಹ ಬಗೆದ ದಿನ. ಪವಿತ್ರ ಬೈಬಲ್‌ನೊಂದಿಗೆ ಕೋವಿ ಮತ್ತು ಪವಿತ್ರ ಕುರಾನ್‌ನೊಂದಿಗೆ ತಲವಾರನ್ನು ಹಿಡಿದ ಎರಡು ಜಾಗತಿಕ ಶಕ್ತಿಗಳ ಮಧ್ಯೆ ನಿರಾಯುಧ ಮತ್ತು ಅಮಾಯಕ ಜನರು ತಮ್ಮ ಜೀವನದ ಭದ್ರತೆಯ ಬಗ್ಗೆ ನಲುಗಿದ ದಿನ. ಧರ್ಮದ ಹೆಸರಿನಲ್ಲಿಯಾಗಲೀ, ರಾಜಕೀಯ ಉದ್ದೇಶದಿಂದಲಾಗಲೀ ಜಗತ್ತನ್ನು ತಮ್ಮ ಪದತಲದಲ್ಲಿಟ್ಟುಕೊಳ್ಳಬೇಕೆಂಬ ಹುನ್ನಾರದ ಆ ಎರಡು ಶಕ್ತಿಗಳನ್ನು ಬಗ್ಗಿಸುವ ಮೂರನೆಯ ಮಹಾ ಮಾನವೀಯ ಶಕ್ತಿಯನ್ನು ನಿರ್ಮಿಸಬೇಕೆಂದು ಸಂಕಲ್ಪಿಸಬೇಕಾದ ದಿನ. ಧರ್ಮದ ಅಂಧಾಚರಣೆ ಪರಾಕಾಷ್ಠೆ ಮುಟ್ಟಿದ ದಿನ. ಧರ್ಮಾಂಧತೆಯ ಕತ್ತಲೆ ಕಳೆದು ಪೂರ್ವ ದಿಗಂತದಲ್ಲಿ ಮಾನವೀಯತೆಯ ನವ ಅರುಣೋದಯದ ನಿರೀಕ್ಷೆ ಮೂಡಿಸಿದ ದಿನ.

ಇಂದಿನ ರಾಜಕೀಯ, ಆರ್ಥಿಕ, ಔದ್ಯೋಗಿಕ ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಒಬಾಮಾ- ಒಸಾಮಾ ಒಂದೇ ತಕ್ಕಡಿಯಲ್ಲಿ ಸರಿಸಮಾನವಾಗಿ ತೂಗುತ್ತಾರೆ. ಯಾರು ಹೆಚ್ಚೂ ಇಲ್ಲ, ಯಾರು ಕಡಿಮೆಯೂ ಇಲ್ಲ. ಒಬಾಮಾರಲ್ಲಿ ಜಾಗತಿಕ ಮಟ್ಟದ ಆರ್ಥಿಕ ಸಾಮ್ರಾಜ್ಯದ ಸಾಮ್ರಾಟ ತನ್ನ ದೇಶವಾಗಬೇಕೆಂಬ ಮಹತ್ವಾಕಾಂಕ್ಷೆಯಿದ್ದರೆ, ಒಸಾಮಾನಲ್ಲಿ ಒಂದು ಧರ್ಮದ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯಿದೆ. ಆದ್ದರಿಂದಲೇ ಅವರಿಬ್ಬರ ಬಾಯಿಯಿಂದ ಒಂದೇ ಮಾತು ಬಂದಿದೆ- "ಕಿಲ್ ಒಸಾಮಾ, ಕಿಲ್ ಒಬಾಮಾ". ಒಬಮಾ ಒಂದು ಧರ್ಮದ ಸಂಕೇತವಾಗಿದ್ದರೆ ಒಸಾಮಾ ಇನ್ನೊಂದು ಧರ್ಮದ ಸಂಕೇತ. ಇವರಿಬ್ಬರ ಮಹತ್ವಾಕಾಂಕ್ಷೆ ಪರಸ್ಪರರಿಂದ ಪರಸ್ಪರರ ರಕ್ಷಣೆ ಆಗಿದ್ದರೂ ಆ ಮಹತ್ವಾಕಾಂಕ್ಷೆಯ ಈಡೇರಿಕೆಗೆ ಉಪಯೋಗವಾಗುತ್ತಿರುವ ಇಂಧನ ಧರ್ಮದ ವಿಚಾರವೇ. ಒಸಾಮಾನ ಭಯೋತ್ಪಾದಕತೆ ಹೇಗೆ ಕುರಾನಿನ ಜೀವನ ತತ್ವದ ಬೋಧನೆಗೆ ವಿರೋಧವಾಗಿದೆಯೋ ಅದೇ ರೀತಿ ಭಯೋತ್ಪಾದಕತೆಯ ವಿರುದ್ಧದ ಒಬಾಮಾನ ಸಮರವು ಬೈಬಲ್ ಬೋಧಿಸಿದ ಜೀವನ ತತ್ವಕ್ಕೆ ವಿರುದ್ಧವಾಗಿದೆ. ಒಬಾಮಾ ಮತ್ತು ಒಸಾಮಾರ ಕೃತ್ಯಗಳು, ಅವು ಯಾವುದೇ ಸ್ವರೂಪದ್ದಾಗಿರಲಿ ಅಥವಾ ಯಾವುದೇ ಕಾರಣದ್ದಾಗಿರಲಿ ಅವು ಎಷ್ಟು ಸಂಕೀರ್ಣವಾಗಿವೆಯೆಂದರೆ ಅವರಿಬ್ಬರಲ್ಲಿ ಯಾರು ಹೆಚ್ಚು ದೋಷಿ ಮತ್ತು ಯಾರು ಪ್ರಥಮ ದೋಷಿ ಎಂಬುದನ್ನು ತಿಳಿಯುವುದೇ ಕಷ್ಟಸಾಧ್ಯವಾಗುತ್ತಾ ಹೋಗುತ್ತಲಿದೆ. ಅವರಿಬ್ಬರ ಪರಸ್ಪರರ ದೋಷಾರೋಪಣೆ ಜನಸಾಮಾನ್ಯರ ನಿರ್ಣಾಯಕ ಶಕ್ತಿಗೆ ಮೀರಿದುದಾಗುತ್ತಲಿದೆ. ಒಬಾಮಾ-ಒಸಾಮಾರ ಮಧ್ಯದ ಇಂದಿನ ಕದನಕ್ಕೆ ಜಾನ್ ಗಾಲ್ಟುಂಗ್ ಎಂಬ ಇತಿಹಾಸಕಾರನ ಪ್ರಕಾರ ಎಂಬತ್ತು ವರ್ಷದ ಹಿಂದಿನ ಐತಿಹಾಸಿಕ ಕಾರಣಗಳಿವೆ! ೨೦೦೧ ಸೆಪ್ಟಂಬರ್ ೧೧ರ ಆಲ್‌ಖೈದಾ ಮೂಲಕ ಒಸಾಮಾ ವಿಶ್ವ ವಾಣಿಜ್ಯ ಸಂಸ್ಥೆಯ ಮೇಲೆ ನಡೆಸಿದ ದಾಳಿಯ ಹತ್ತು ವರ್ಷದ ನಂತರ ಒಸಾಮಾನ ಕೊಲೆಯನ್ನು ಅಮೇರಿಕಾ ಮಾಡಿದೆ. ಇದಕ್ಕೆ ಪ್ರತಿಯಾಗಿ ಈಗಾಗಲೇ ಪಾಕಿಸ್ತಾನದಲ್ಲಿ ಅನೇಕ ಪ್ರತೀಕಾರಗಳಾಗಿವೆ. ಅಮೇರಿಕಾದ ಮೇಲೆ ದಾಳಿ ನಡೆಸುವ ಸೂಚನೆಯನ್ನು ಆಲ್‌ಖೈದಾ ಕೊಟ್ಟಿದೆ.

ಇತಿಹಾಸವೆಂದರೆ ಪ್ರತಿಕಾರಗಳ ಸರಮಾಲೆ. ಈಗಿನ ಒಬಾಮಾ-ಒಸಾಮಾ ಕದನವೂ ಕೂಡ ಇತಿಹಾಸದ ಪ್ರತೀಕಾರದ ಸರಮಾಲೆಯ ಒಂದು ಘಟನೆಯೇ ಆಗಿದೆ. ಪ್ರತೀಕಾರದ ಒಂದು ಘಟನೆಯಲ್ಲಿ ಇನ್ನೊಂದು ಪ್ರತೀಕಾರದ ಬೀಜ ಅಡಗಿರುತ್ತದೆ. ಆದ್ದರಿಂದ ಒಬಾಮಾ-ಒಸಾಮಾ ಕದನದ ಅಂತ್ಯ ಯಾವತ್ತು ಮತ್ತು ಹೇಗೆ ಎಂದು ನಿಖರವಾಗಿ ಹೇಳುವುದು ಇಂದಿನ ಸ್ಥಿತಿಯಲ್ಲಿ ಹೇಳಲು ಯಾರಿಗೂ ಸಾಧ್ಯವಿಲ್ಲ. ಅಲ್ಲದೆ, ಕೋವಿ ಹಿಡಿದ ಕೈಗೆ ಗುಂಡು ಹಾರಿಸುವ ಚಪಲವಿರುವಂತೆ ಕತ್ತಿ ಹಿಡಿದ ಕೈಗೆ ರುಂಡ-ಮುಂಡ ಬೇರ್ಪಡಿಸುವ ಚಪಲವಿರುತ್ತದೆ. ಕತ್ತಿ ಮತ್ತು ಕೋವಿಯ ಅಟ್ಟಹಾಸವನ್ನು ನಿಲ್ಲಿಸಬೇಕಾದರೆ ಇನ್ನೊಂದು ಬಹು ದೊಡ್ಡ ಮಾನವೀಯ ಶಕ್ತಿ ಭೂಮಿಯ ಮೇಲೆ ಉದ್ಭವಿಸಬೇಕಾಗುತ್ತದೆ. ಒಬಾಮಾ ಮತ್ತು

ಒಸಾಮಾರನ್ನು ನಿಃಶಸ್ತ್ರೀಕರಣಗೊಳಿಸುವ ಬಹು ದೊಡ್ಡ ಅಹಿಂಸಕ ಶಕ್ತಿಯ ನಿರ್ಮಾಣವಾಗಬೇಕಾಗುತ್ತದೆ.

ಒಬಾಮಾ-ಒಸಾಮಾ ಇಬ್ಬರೂ ಹಿಂಸೆಯನ್ನು ಪ್ರೀತಿಸುವ ಎದುರಾಳಿಗಳಾಗಿದ್ದಾರೆ; ಇಬ್ಬರ ಆರಾಧ್ಯ ದೇವತೆ ಹಿಂಸೆಯೇ ಆಗಿದೆ. ಒಸಾಮಾ ಕಟ್ಟಿ ಬೆಳೆಸಿದ ಆಲ್‌ಖೈದಾದಂಥ ಸಂಘಟನೆ ಅವನೊಂದಿಗೇ ಮುಕ್ತಾಯವಾಗುವಂಥದ್ದಲ್ಲ. ಅದೇ ರಿತಿ ಒಬಾಮಾ ಪ್ರತಿನಿಧಿಸುವ ಸರ್ಕಾರ ಒಬಾಮಾನ ಪದಚ್ಯುತಿಯೊಂದಿಗೆ ಮುಕ್ತಾಯವಾಗುವಂಥಹುದಲ್ಲ. ಎರಡೂ ಬೃಹತ್ ಸಂಘಟನೆಗಳೇ ಆಗಿವೆ. ಆಲ್‌ಖೈದಾ ಸಂಘಟನೆಯು ೩೪ ದೇಶಗಳಲ್ಲಿ ಚಟುವಟಿಕೆ ನಡೆಸುತ್ತಿದೆ. ಅಮೇರಿಕಾ ರಾಜಕೀಯ ಕೈವಾಡವಂತೂ ಜಾಗತಿಕವಾಗಿದೆ. ಯಾರು ಒಸಾಮಾನ ಹತ್ಯೆಯನ್ನು ಜಯವೆಂದು ವಿಜೃಂಭಿಸುತ್ತಾರೋ ಅವರು ಪರೋಕ್ಷವಾಗಿ ಹಿಂಸಾತ್ಮಕ ಹತ್ಯಾಕಾಂಡದಲ್ಲಿ ವಿಜೃಂಭಿಸಿದಂತೆಯೇ ಸರಿ; ಹತ್ಯಾಕಾಂಡವನ್ನು ಪರೋಕ್ಷವಾಗಿ ಕಾನೂನುಬದ್ಧಗೊಳಿಸಿದಂತೆಯೇ ಸರಿ; ಹತ್ಯಾಕಾಂಡವು ಇಪ್ಪತ್ತೊಂದನೇ ಶತಮಾನದ ಜೀವನ ಪದ್ಧತಿಯಾಗುತ್ತಲಿದೆಯೆಂಬುದೇ ಸರಿ; ಇಂದಿನ ನಾಗರಿಕತೆ ಅನಾಗರಿಕವಾಗುತ್ತಿದೆಯೆಂಬುದೇ ಸರಿ.

ಒಬಾಮಾ-ಒಸಾಮಾರ ಕದನದ ಬಗ್ಗೆ ಜಾಗತಿಕ ಚಿಂತೆಯೊಂದಿದೆ. ಆ ಚಿಂತೆ ಇವರಿಬ್ಬರ ಕದನವನ್ನು ನಿಲ್ಲಿಸುವ ಯಾವುದೇ ಪ್ರಕಾರವಾದ ಬಲವಾದ ಸಂಸ್ಥೆಯಿಲ್ಲದಿರುವುದು. ಇಂದಿನ ಜಾಗತಿಕ ವ್ಯವಸ್ಥೆಯಲ್ಲಿರುವ ವಿಶ್ವಸಂಸ್ಥೆಯ ಬಗ್ಗೆ ಯಾವ ನಿರೀಕ್ಷೆಯನ್ನೂ, ಅಪೇಕ್ಷೆಯನ್ನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಆ ಸಂಸ್ಥೆ ಸಂಪೂರ್ಣವಾಗಿ ಅಮೇರಿಕಾದ ಕೈಗೊಂಬೆಯಾಗಿದೆ. ಅಷ್ಟೇ ಅಲ್ಲ, ಅದರ ಉಸಿರಾಟಕ್ಕೆ ಅಮೇರಿಕಾದ ವಾತಾಯನ ಬೇಕು. ಇನ್ನು ನ್ಯಾಟೋ ಸಂಘಟನೆಯೂ ಕೂಡ ಅಮೇರಿಕಾದ ನೇತೃತ್ವದಲ್ಲಿಯೇ ಕಾರ್ಯವೆಸಗುವ ಸಂಸ್ಥೆಯಾಗಿದೆ. ಇರಾಕ್ ಮೇಲೆ ನ್ಯಾಟೋ ಸಂಸ್ಥೆಯು ನಡೆಸುತ್ತಿರುವ ಸೈನ್ಯಾಚರಣೆ ಸ್ಪಷ್ಟವಾದ ಉದಾಹರಣೆಯಾಗಿದೆ. ಅಮೇರಿಕಾದ ಆಣತಿಯ ಮೇರೆಗೇ ಇಂಗ್ಲೆಂಡ್ ಮತ್ತು ಫ್ರಾನ್ಸ್ ಲಿಬಿಯಾದ ಸರ್ವಾಧಿಕಾರಿ ಗಢಾಫಿಯ ವಿರುದ್ಧವಾಗಿ ಮಿಲಿಟರಿ ಕಾರ್ಯಾಚರಣೆಗೆ ತೊಡಗಿರುವವು. ಇಂದಿನ ಜಾಗತಿಕ ಮಟ್ಟದಲ್ಲಿ ಒಬಾಮಾ-ಒಸಾಮಾ ಕದನವನ್ನು ನಿಲ್ಲಿಸುವ ಅಥವಾ ಅದನ್ನು ಹದ್ದುಬಸ್ತಿನಲ್ಲಿಡುವ ಇಲ್ಲವೇ ಆ ಇಬ್ಬರೂ ನಡೆಸಿದ ಮಾನವ ಹತ್ಯೆಗಾಗಿ ಅವರಿಗೆ ಶಿಕ್ಷೆ ಕೊಡುವ ಯಾವ ನ್ಯಾಯ ಸಂಹಿತ ಸಂಸ್ಥೆಯೂ ಇಲ್ಲವಾಗಿದೆ. "ಕುದುರೆಯೂ ಅವರದೇ, ಮೈದಾನವೂ ಅವರದೇ" ಎಂಬ ಮಾತಿನಂತೆ ಅವರಿಬ್ಬರಿಗೂ ಕೋವಿ ಮತ್ತು ಕತ್ತಿಯನ್ನು ನಿರಾಳವಾಗಿ ಮತ್ತು ತಮ್ಮ ಇಚ್ಛಾನುಸಾರವಾಗಿ ಉಪಯೋಗಿಸುವ ಸ್ವಾತಂತ್ರ್ಯ ಸಿಕ್ಕಿದೆ. ದುರ್ದೈವದ ಸಂಗತಿಯೆಂದರೆ ಎರಡು ಮಹಾ ಯುದ್ಧಗಳ ನಂತರವೂ, ಜಗತ್ತಿನಾದ್ಯಂತ ವಿನಾಶಕಾರಿ ಶಸ್ತ್ರಾಸ್ತ್ರಗಳ ಪಸರಿಸುವಿಕೆಯ ನಂತರವೂ ಜಗತ್ತಿನಲ್ಲಿ ನಡೆಯಬಹುದಾದ ಪುಂಡಾಟವನ್ನು ನಿಯಂತ್ರಿಸುವ ಬಲಾಢ್ಯ ಸಂಸ್ಥೆಯಾಗಲೀ, ವ್ಯವಸ್ಥೆಯಾಗಲೀ

ನಿರ್ಮಾಣಗೊಳ್ಳದಿರುವುದು. ಜಗತ್ತಿನ ಪ್ರತಿಯೊಂದು ದೇಶವೂ ತನ್ನ ಉಳಿಯುವಿಕೆಯ ಬಗ್ಗೆ ಯೋಚಿಸುತ್ತಿವೆಯೇ ಹೊರತು ಜಗತ್ತಿನ ಉಳಿಯುವಿಕೆಯ ಬಗ್ಗೆ ಆಲೋಚಿಸುತ್ತಿಲ್ಲ.; ಆ ಬಗ್ಗೆ ಕಿಂಚಿತ್ ಚಿಂತೆಯೂ ಇಲ್ಲ. ಆದ್ದರಿಂದ ಒಬಾಮಾ ಮತ್ತು ಒಸಾಮಾರ ನಡುವಿನ ಕದನಕ್ಕೆ ಜಗತ್ತಿನ ಎಲ್ಲ ರಾಷ್ಟ್ರಗಳೂ ತಮ್ಮ ನೈತಿಕ ರಹದಾರಿಯನ್ನು ಕೊಟ್ಟಂತಾಗಿದೆ.

ಒಬಾಮಾ-ಒಸಾಮಾರ ಕದನದ ಬಗ್ಗೆ ಇನ್ನೊಂದು ಚಿಂತೆಯ ವಿಷಯವೇನೆಂದರೆ ಅವರ ಕದನಕ್ಕೆ ಯಾವ ಉದ್ದೇಶವೂ ಇಲ್ಲ, ತತ್ವವೂ ಇಲ್ಲ, ಗುರಿಯೂ ಇಲ್ಲ! ಈ ಮೊದಲು ನಡೆದ ಎರಡು ಮಹಾ ಯುದ್ಧಗಳು ಅಂತ್ಯಗೊಳ್ಳಲು ಕಾರಣ ಆ ಯುದ್ಧಗಳು ಯಾವ ಕಾರಣ ಅಥವಾ ಉದ್ದೇಶಕ್ಕಾಗಿ ಪ್ರಾರಂಭವಾದವೋ ಅವು ನೆರವೇರುತ್ತಿದ್ದಂತೆ ಮುಕ್ತಾಯವಾದವು; ಅಲ್ಲದೆ ಮುಂದೆ ಯುದ್ಧರಹಿತ ವಿಶ್ವದ ಬಗ್ಗೆ ಚಿಂತನೆಯೂ ಪ್ರಾರಂಭವಾಯಿತು. ಇಂಥ ಸೀಮಿತ ಆವರಣ ಒಬಾಮಾ-ಒಸಾಮಾ ಕದನಕ್ಕೆ ಇಲ್ಲವಾಗಿದೆ. ಹಿಂಸಾರಹಿತ ಜಗತ್ತಿನ ಬಗ್ಗೆ ಅವರ ಮನಸ್ಸಿನಲ್ಲಿ ಯಾವ ತೀವ್ರತೆಯೂ ಇಲ್ಲ. ಆದ್ದರಿಂದ ಅವರಿಬ್ಬರ ಕದನಕ್ಕೆ ಯಾವ ಮೇರೆಯೂ ಇಲ್ಲ, ಗಡಿಯೂ ಇಲ್ಲ. ಇಡೀ ಜಗತ್ತೇ ಅವರ ಯುದ್ಧಕ್ಷೇತ್ರ, ಯಾರು ಬೇಕಾದರೂ ಅವರ ಶಸ್ತ್ರಕ್ಕೆ ತುತ್ತಾಗಬಹುದು. ಇಂಥ ಭಯಾನಕ ಸ್ಥಿತಿ ಜಾಗತಿಕ ಇತಿಹಾಸದಲ್ಲಿ ಹಿಂದೆಂದೂ ಉಂಟಾಗಿರಲಿಲ್ಲ.

ಒಬಾಮಾ- ಒಸಾಮಾ ಕದನದಲ್ಲಿ ಒಂದು ವೈಪರಿತ್ಯವಿದೆ. ಒಬಾಮಾ ಒಂದು ರಾಷ್ಟ್ರದ ಅಧ್ಯಕ್ಷ. ಅವರಿಗೆ ಆ ದೇಶದ ಕಟ್ಟುಪಾಡುಗಳ ಚೌಕಟ್ಟಿದೆ; ಅವರು ಕೈಗೊಳ್ಳಬಹುದಾದ ತೀರ್ಮಾನಗಳಿಗೆ, ಕೈಗೊಳ್ಳಬಹುದಾದ ಕೃತ್ಯಗಳಿಗೆ ನಿಯಂತ್ರಣವಿದೆ. ಆದರೆ ಒಸಾಮ ಬಿನ್ ಲಾಡೆನ್ ಸಂಸ್ಥೆಗೆ ಅಂಥ ಯಾವ ಕಟ್ಟುಪಾಡೂ ಇಲ್ಲ. ನಿಯಂತ್ರಣವೂ ಇಲ್ಲ. ತನ್ನ ಮನಸ್ಸಿಗೆ ತೋಚಿದಂತೆ, ತನ್ನ ಪರಿಸ್ಥಿತಿ-ಸಾಮರ್ಥ್ಯಕ್ಕೆ ಅನುಕೂಲವಾಗುವಂತೆ ಎಲ್ಲಿ ಬೇಕೆಂದರಲ್ಲಿ ಯಾವಾಗ ಬೇಕೆಂದಾದಲ್ಲಿ ಯದ್ವಾತದ್ವಾ ದಾಳಿ ಮಾಡಬಹುದು. ಅಮೇರಿಕಾ ತಾನು ಮಾಡುವ ಕೃತ್ಯಗಳ ಬಗ್ಗೆ ಉಂಟಾಗುವ ಜಾಗತಿಕ ಭಿನ್ನಾಭಿಪ್ರಾಯಗಳಿಗೆ ಸ್ವಲ್ಪವಾದರೂ ಹಿಂಜರಿಯಬೇಕಾಗುತ್ತದೆ. ಆದರೆ ಆಲ್‌ಖೈದಾ ಸಂಘಟನೆಗೆ ಅಂಥ ಮಾನವೀಯ ಸಂವೇದನೆಯೇ ಇಲ್ಲ. ಆದ್ದರಿಂದ ಅದನ್ನು ನಿಯಂತ್ರಿಸುವುದು ಸುಲಭದ ಮಾತಲ್ಲ. ಮನಸ್ಸೆಂಬ ಪದಾರ್ಥವುಳ್ಳ ಮನುಷ್ಯನ್ನು ನಿಯಂತ್ರಿಸಬಹುದು, ಮನೋರಾಹಿತ್ಯ ರಾಕ್ಷಸನನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಒಬಾಮಾ- ಒಸಾಮಾ ಕದನದ ಅಂತರಾಳದಲ್ಲಿರುವ ಸಮಸ್ಯೆಯೇ ಇದು- ರಾಕ್ಷಸೀ ಪ್ರವೃತ್ತಿಯನ್ನು ಹೋಗಲಾಡಿಸಿ, ಮಾನವೀಯ ವೃತ್ತಿಯನ್ನು ಅವರಲ್ಲಿ ನಿರ್ಮಿಸುವುದು ಹೇಗೆ ಎಂಬುದು.

ಒಬಾಮಾ-ಒಸಾಮಾ ಕದನದ ಘೋರ ಪರಿಣಾಮಕ್ಕೆ ನೇರವಾಗಿ ಒಳಗಾಗಿರುವ ದೇಶಗಳು ಭಾರತ ಮತ್ತು ಪಾಕಿಸ್ತಾನ. ಭಾರತದೊಳಕ್ಕೆ ಭಯೋತ್ಪಾದನೆ ಮತ್ತು ಅಮಾಯಕರ ಹತ್ಯೆಗೆ ಕಾರಣವಾಗುವ ಒಸಾಮಾನ ದಮನ ಪರೋಕ್ಷವಾಗಿ

ಅಮೇರಿಕಾದ ಮೇಲಿನ ಸೇಡು ತೀರಿಸಿಕೊಳ್ಳುವ ಬಯಕೆ ಕಾರಣವಾಗಿದ್ದರೆ ಪಾಕಿಸ್ತಾನದಲ್ಲಿಯೇ ನಡೆಯುವ ಭಯೋತ್ಪಾದನೆ ಮತ್ತು ನಾಗರಿಕರ ಹತ್ಯೆಯ ಘಟನೆಗಳಿಗೆ ಪಾಕಿಸ್ತಾನದಲ್ಲಿ ರಾಜಕೀಯ ಅಸ್ಥಿರತೆಯನ್ನು ಉಂಟುಮಾಡುವುದರ ಮೂಲಕ ನಿಧಾನವಾಗಿ ಪಾಕಿಸ್ತಾನದಲ್ಲಿ ತನ್ನದೇ ಆದ ಸರ್ಕಾರ ರಚಿಸಿ, ತನ್ಮೂಲಕ ತನ್ನ ಅಸ್ಪಷ್ಟ ಹಾಗೂ ಗೌಪ್ಯ ಅಜೆಂಡಾಗಳಿಗೆ ಶಾಸನಬದ್ಧತೆಯನ್ನು ಒದಗಿಸಿಕೊಳ್ಳುವ ಹುನ್ನಾರ ಕಾರಣವಾಗಿದೆ. ಇನ್ನು ಪಾಕಿಸ್ತಾನ ಮತ್ತು ಅಫಘಾನಿಸ್ತಾನದ ತಾಲಿಬಾನ್ ಸಂಘಟನೆಗಳ ಮೇಲೆ ಅಮೇರಿಕಾದ ದಾಳಿಯ ಉದ್ದೇಶ ಭಯೋತ್ಪಾದಕತೆಯ ಹೆಸರಿನಲ್ಲಿ ಅಲ್‌ಖೈದಾ ಮತ್ತು ಅಂಥಹ ಇತರ ಸಂಘಟನೆಗಳನ್ನು ನಿರ್ಮೂಲನ ಮಾಡುವುದಾಗಿದೆ. ಆದರೆ ಇಲ್ಲಿರುವ ಸಮಸ್ಯೆಯೇನೆಂದರೆ, ಒಸಾಮಾನ ಸಂಘಟನೆ ಜಗತ್ತಿನ ಅರ್ಧ ಭಾಗವನ್ನೇ ಆವರಿಸಿದೆ. ಸುಮಾರು ಮೂವತ್ತನಾಲ್ಕು ದೇಶಗಳಲ್ಲಿ ಅಲ್‌ಖೈದಾ ನೆಲೆಗಳಿವೆ. ಅಲ್ಲದೆ ಕಾಲ ಕಳೆದಂತೆ ಆ ಸಂಘಟನೆ ಬಲಗೊಳ್ಳುತ್ತಾ ಹೋಗುತ್ತಿದೆ. ಅಲ್‌ಖೈದಾ ಅಥವಾ ಒಸಾಮಾನ ವಿರುದ್ಧ ಹೋರಾಡುವುದೆಂದರೆ ಜಗತ್ತಿನ ಬೇರೆಬೇರೆ ಪ್ರದೇಶಗಳಲ್ಲಿ ನಿರಂತರ ಹೋರಾಟ ಅಥವಾ ಯುದ್ಧವೇ ಆಗಿದೆ. ಅಮೇರಿಕಾದ ಈಗಿನ ಅಧ್ಯಕ್ಷರಾದ ಬರಾಕ್ ಒಬಾಮಾ ತಮ್ಮ ಹಿಂದಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್‌ರವರಿಗಿಂತ ಹೋರಾಟದ ಪ್ರದೇಶವನ್ನು ಹೆಚ್ಚು ವಿಸ್ತರಿಸಿದ್ದಾರೆ. ಜಾರ್ಜ್ ಬುಷ್ ಇರಾಕ್ ಮತ್ತು ಅಫಘಾನಿಸ್ತಾನವೆಂಬ ಎರಡು ಇಸ್ಲಾಮಿ ದೇಶಗಳ ವಿರುದ್ಧ ಮಾತ್ರ ಯುದ್ಧ ಸಾರಿದ್ದರು. ಈಗ ಒಬಾಮಾ ಪಾಕಿಸ್ತಾನ, ಯೆಮನ್, ಸೋಮಾಲಿಯಾ ಮತ್ತು ಲಿಬಿಯಾದಂಥ ಇನ್ನೂ ನಾಲ್ಕು ಇಸ್ಲಾಮಿ ದೇಶಗಳ ವಿರುದ್ಧ ಯುದ್ಧ ಸಾರಿದ್ದಾರೆ. ಈ ಎಲ್ಲ ಪ್ರಮುಖ ಮುಸಲ್ಮಾನ ಬಾಹುಳ್ಯ ದೇಶಗಳಲ್ಲಿ ಯುದ್ಧ ನಡೆಸಿದರೂ ಅಮೇರಿಕಕ್ಕೆ ಬಿನ್ ಲಾಡೆನ್ನನ ಪತ್ತೆ ಹಚ್ಚಲು ಹತ್ತು ವರ್ಷಗಳೇ ಬೇಕಾದವು.

ಈಗಾಗಲೇ ಹೇಳಿರುವಂತೆ ಬಿನ್ ಲಾಡೆನ್‌ನ ಹತ್ಯೆಯೊಂದಿಗೆ ಅಲ್‌ಖೈದಾ ಸಂಘಟನೆಯಾಗಲೀ ಅದರ ಹಿಂದೆ ಇರುವಂತಹ ವಿಚಾರವಾಗಲೀ ಮುಕ್ತಾಯಕ್ಕೆ ಬರುವಂಥದಲ್ಲ. ಯಾವರೀತಿಯಲ್ಲಿ ಭಾರತೀಯ ಪುರಾಣಗಳಲ್ಲಿ ರಕ್ತಬೀಜಾಸುರನ ಕಥಾವರ್ಣನೆಯಿದೆಯೋ ಅದೇ ರೀತಿ ಅಲ್ ಖೈದಾ ಸಂಘಟನೆಯದ್ದೂ ಆಗಿದೆ. ಒಬ್ಬ ಸತ್ತರೆ ಅವನ ಸ್ಥಳದಲ್ಲಿ ಅವನಂತಹ ಹತ್ತು ಜನ ಹುಟ್ಟುತ್ತಾರೆ. ಒಸಾಮಾ ಬಿನ್ ಲಾಡೆನ್‌ನ ಸಾವಿನೊಂದಿಗೆ ಅವನ ಇತಿಹಾಸವೂ ಪರಿಸಮಾಪ್ತಿಯಾಗಬೇಕಿತ್ತು. ಬದಲಿಗೆ ಅವನನ್ನು ಹುತಾತ್ಮನೆಂದು ಬಿಂಬಿಸುವ ಪ್ರಯತ್ನವಿದೆ. ಇದೊಂದು ಅಪಾಯಕಾರಿ ಬೆಳವಣಿಗೆಯಾಗಬಹುದೆಂದು ತಿಳಿದು ಅಮೇರಿಕಾ ಲಾಡೆನ್‌ನ ಶವವನ್ನು ಫೆಸಿಫಿಕ್ ಸಾಗರದಲ್ಲಿ ಮುಳುಗಿಸಿತು. ಆದರೆ ಅದರಿಂದೇನು? ಅವನ ಜೆಹಾದ್ ವಿಚಾರಗಳ ಸಂತತಿ ಕೊನೆಗೊಳ್ಳುವುದೇ? ಈಗಾಗಲೇ ಅಲ್‌ಖೈದಾ ಒಸಾಮಾನ ಉತ್ತರಾಧಿಕಾರಿಯಾಗಿ ಇಲಿಯಾಸ್ ಕಾಶ್ಮೀರಿ ಎಂಬ ಜಾಗತಿಕಮಟ್ಟದ ಭಯೋತ್ಪಾದಕನನ್ನು ನಿಯೋಜಿಸುವ ಸಾಧ್ಯತೆಗಳಿವೆ. ಈತನ ತಲೆಗೆ ಅಮೇರಿಕಾ

ಐದು ದಶ ಲಕ್ಷ ಡಾಲರ್‌ಗಳ ಬಹುಮಾನ ಘೋಷಿಸಿದೆ. ಅಲ್‌ಖೈದಾ ಸಂಘಟನೆಗೆ ಇಂಥ ಭಯೋತ್ಪಾದಕ ಉತ್ತರಾಧಿಕಾರಿಗಳ ದೊಡ್ಡ ಸರಮಾಲೆಯೇ ಇದೆ. ಅಲ್ಲದೆ, ಅಲ್‌ಖೈದಾ ಮತ್ತು ಲಷ್ಕರೆ-ಎ-ತೋಯ್ಬಾದಂಥ ಸಂಘಟನೆಗಳು ತಮಗೆ ಸಂಪೂರ್ಣ ಅಮಾನ್ಯ, ತಮ್ಮ ದೇಶಗಳಲ್ಲಿ ಅವುಗಳಿಗೆ ಎಳ್ಳಷ್ಟೂ ಸ್ಥಾನವಿಲ್ಲ, ಅವು ಕಾನೂನು ಬಾಹಿರ ಎಂದು ಯಾವ ಇಸ್ಲಾಮೀ ದೇಶಗಳೂ ಸ್ಪಷ್ಟವಾಗಿ ಘೋಷಿಸಿಲ್ಲ. ಇಂಥ ಪರಿಸ್ಥಿತಿಯಲ್ಲಿ ಒಸಾಮಾ ವಿರುದ್ಧ ಒಬಾಮಾ ಘೋಷಿಸಿರುವ ಕದನಕ್ಕೆ ವಿರಾಮ ದೊರೆಯಬಹುದೆಂದು ಅನಿಸುವುದೇ?

ಇನ್ನು ಒಸಾಮಾ, ಒಬಾಮಾ ವಿರುದ್ಧ ಹೂಡಿರುವ ಕದನ ಸಣ್ಣ ವ್ಯಾಪ್ತಿಯದಲ್ಲ. ಇಂದು ಜಗತ್ತಿನಲ್ಲಿ ಅಮೇರಿಕಾ ಬಹಳ ದೊಡ್ಡ ಬಲಾಢ್ಯ ದೇಶವಾಗಿ ಹೊರಹೊಮ್ಮಿದೆ. ಶ್ರೀಮಂತಿಕೆಯಲ್ಲಿ, ತಾಂತ್ರಿಕತೆಯಲ್ಲಿ, ಸೇನಾಬಲದಲ್ಲಿ, ಔದ್ಯೋಗಿಕರಣದಲ್ಲಿ ಮುಂಚೂಣಿಯಲ್ಲಿದೆ. ಬೇಡವಾದ ದೇಶಗಳನ್ನು ಬಡಿದು ಕೂಡಿಸುವ, ಬೇಕಾದ ದೇಶಗಳನ್ನು ಎತ್ತಿ ನಿಲ್ಲಿಸುವ ಸಾಮರ್ಥ್ಯ ಅಮೇರಿಕಾಕ್ಕೆ ಇದೆ. ಆದ್ದರಿಂದಲೇ ಆ ದೇಶಕ್ಕೆ 'ಜಗತ್ತಿನ ದೊಡ್ಡಣ್ಣ' ಎಂಬ ಅಪಾರ್ಥದ(ಅಪಾತ್ರ!!) ಹೆಸರು ಬಂದಿದೆ. ಅದು ಜಗತ್ತಿನಲ್ಲಿ ತನ್ನ ಪ್ರಶ್ನಾತೀತ ಸಾರ್ವಭೌಮತ್ವವನ್ನು ಮೆರೆಯಲು ಸದಾ ಪ್ರಯತ್ನಿಸುತ್ತದೆ. ಇಂಥ ಅಮೇರಿಕಾ ಮತ್ತು ಅದರ ಬಲಾಢ್ಯ ದೇಶಗಳನ್ನು ಭಯೋತ್ಪಾದನೆಯಂಥ ಮಾರ್ಗದ ಮೂಲಕ ಒಸಾಮಾ ಬಿನ್ ಲಾಡೆನ್ ಜಯಿಸಬಹುದೆ? ಅವನು ಅಮಾಯಕರ ಹತ್ಯೆ ಮಾಡುತ್ತ ಹೋಗಬಹುದು ಅಷ್ಟೆ. ಅದರಾಚೆಗೆ ಅವನು ಸಧ್ಯಕ್ಕಂತೂ ಬರಲು ಸಾಧ್ಯವಿಲ್ಲ.

ಹೀಗೆ ನಮ್ಮ ಜಗತ್ತಿನ ಮುಂದೆ ಎರಡು ದುಷ್ಟ ಶಕ್ತಿಗಳ ಘರ್ಷಣೆಯಿದೆ, ಕದನ ಇದೆ. ಅದರೊಂದಿಗೆ ಒಬಾಮಾ- ಒಸಾಮಾ ಕದನದ ಅಂತ್ಯ ಹೇಗೆ ಎಂಬ ಕೋಟಿ ಕೋಟಿ ರೂಪಾಯಿ ಬಹುಮಾನದ ಪ್ರಶ್ನೆಯಿದೆ. ಈ ಪ್ರಶ್ನೆಗೆ ಉತ್ತರ ಕೊಟ್ಟು ಬಹುಮಾನ ಪಡೆಯುವವರು ಯಾರಾದರೂ ಇದ್ದಾರೆಯೇ? ಇಂಥ ಅಂಧಕಾರ ಯುಗದಲ್ಲಿ ಇಸ್ಲಾಂ ಧರ್ಮದ ಸ್ಥಾಪಕ ಮಹಮದ್ ಪೈಗಂಬರ್, ಕ್ರಿಶ್ಚಿಯನ್ ಧರ್ಮದ ಬೋಧಕ ಏಸು ಒಟ್ಟಿಗೆ ಜನ್ಮ ತಳೆದು ಬಂದು ತಮ್ಮ -ತಮ್ಮ ಅನುಯಾಯಿಗಳಿಗೆ ಶಾಂತಿಯ ಮತ್ತು ಪ್ರೇಮದ ಮಂತ್ರವನ್ನು ಬೋಧಿಸಬೇಕು. ಇಲ್ಲವೆ ಸುಂದೋಪಸುಂದರ ಕಥೆಯಂತೆ ಒಬಾಮಾ-ಒಸಾಮಾ ಹೊಡೆದಾಡಿ-ಕಾದಾಡಿ ನಿರ್ನಾಮವಾಗಬೇಕು. ಇಲ್ಲವೆ ಮಹಾತ್ಮಾ ಗಾಂಧೀಜಿಯವರು ತೋರಿಸಿದ ಅಹಿಂಸಾಮಾರ್ಗವನ್ನು ಅವರು ಹಿಡಿಯಬೇಕು. ಇವೆರಡೇ ಒಬಾಮಾ- ಒಸಾಮಾ ಕದನಕ್ಕೆ ಅಂತ್ಯ ತರುವ ಮತ್ತು ಪರಿಹಾರ ತಂದುಕೊಡುವ ಅವಕಾಶಗಳೆಂದು ಅನ್ನಿಸುತ್ತದೆ.

* * *

(4)

ನಾಲ್ಕು ಸಮಸ್ಯೆಗಳು

- ದಾದಾ ಧರ್ಮಾಧಿಕಾರಿ

ಜಗತ್ತಿನಲ್ಲಿ ಏನೆಲ್ಲ ಸಮಸ್ಯೆಗಳು ಇವೆಯೋ ಅವೆಲ್ಲ ನಮ್ಮ ದೇಶದಲ್ಲಿವೆ. ನಮ್ಮ ದೇಶ ಒಂದರ್ಥದಲ್ಲಿ ಜಾಗತಿಕ ಸಮಸ್ಯೆಗಳ ಒಂದು ಸಂಗ್ರಹಾಲಯವೇ ಆಗಿದೆ. ನಮ್ಮ ದೇಶದಲ್ಲಿಯ ಯಾವ ಸಮಸ್ಯೆಗಳನ್ನು ಕುರಿತು ನಾನು ಪ್ರಸ್ತಾಪಿಸುತ್ತಿದ್ದೇನೆಯೋ ಅವುಗಳಲ್ಲಿ ಒಂದು ಸಮಸ್ಯೆ ಮನೋವೃತ್ತಿಯದ್ದಾಗಿದೆ. ಆ ಕಾರಣಕ್ಕಾಗಿಯೇ ಮೇಘಾಲಯದ ಸ್ಥಾಪನೆಯಾಯಿತು. ನಮ್ಮ ದೇಶದಲ್ಲಿ ಒಂದು ಹೊಸ ರಾಜ್ಯ ನಿರ್ಮಾಣವಾಯಿತು. ಅಸ್ಸಾಮಿನ ಗುಡ್ಡಗಾಡು ಜನರ ಹೊಸ ರಾಜ್ಯ! ಯಾವ ಆಧಾರದ ಮೇಲೆ ಈ ರಾಜ್ಯ ರಚನೆಯಾಯಿತು? ಭಾಷೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ರಚನೆಯಾಯಿತು. ಆ ಗುಡ್ಡಗಾಡು ಜನರ ಪ್ರಶ್ನೆಯೊಂದೇ ಅಲ್ಲ, ನಾಗಾ ಲ್ಯಾಂಡಿನಲ್ಲಿ ಅರವತ್ತು ಭಾಷೆಗಳಿವೆ! ಆ ಎಲ್ಲವುಗಳಿಂದ ಪ್ರತ್ಯೇಕವಾದ ಒಂದು ಸಾಮಾನ್ಯ ಭಾಷೆಯ ರೂಪದಲ್ಲಿ ಕೃತ್ರಿಮ ಭಾಷೆಯೊಂದನ್ನು ರಚಿಸಲಾಗಿದೆ, ಅದು ಅಸ್ಸಾಮೀ ಶೈಲಿಯದ್ದಾಗಿದೆ. ಆದರೆ ಅಲ್ಲಿ ಒಟ್ಟು ಅರವತ್ತು ಭಾಷೆಗಳಿವೆ ಅಂದಮೇಲೆ, ಅವರಿಗೆ ಯಾವ ಕಾರಣಕ್ಕಾಗಿ ಸ್ವತಂತ್ರ ರಾಜ್ಯದ ಅಗತ್ಯಬಿತ್ತು? ತಾವೆಲ್ಲ ಬೇರೆ ಮಾನವ ವಂಶದ ಜನರೆಂಬ ಅಂಶ ಅವರದ್ದಾಗಿತ್ತು. ನಿಮ್ಮ ಮತ್ತು ನಮ್ಮ ಜಾತಿ ಭಿನ್ನವಾಗಿದೆ! ಇಂಗ್ಲಿಷ್‌ನಲ್ಲಿ ಅದನ್ನು 'ರೇಸ್' ಎನ್ನುತ್ತಾರೆ. ಅಮೇರಿಕೆಯಲ್ಲಿ ಕೆಂಪು ಮತ್ತು ಕಪ್ಪು ಜನರ ವಿವಾದ ನಡೆದಿರುವ ರೀತಿಯಂತೆಯೇ ಇದೂ ಕೂಡ. ಇದೇ 'ರೇಸ್' ಅಂಶದ ಆಧಾರದ ಮೇಲೆಯೇ ಆ ಗುಡ್ಡಗಾಡು ಜನರು ತಮಗೆ ಸ್ವತಂತ್ರ ರಾಜ್ಯ ಬೇಕೆಂದು ಕೇಳಿದರು. "ನಮ್ಮ ಸಂಸ್ಕೃತಿಯೇ ಬೇರೆ ಇದೆ, ಅದನ್ನು ಸಂರಕ್ಷಿಸಬೇಕಿದೆ". ಇದರ ಬಗ್ಗೆ ವಿಚಾರ ಮಾಡಬೇಕು. ಇದೇನು ವಿಷಯ? ಈ ಬೇಡಿಕೆ ಏಕೆ ಹುಟ್ಟಿತು? ಇದರ ಅರ್ಥವೇನು?

ಮೂರನೆಯ ಸಮಸ್ಯೆ ಭಿವಂಡಿ ಮತ್ತು ಜಲಗಾಂವದ್ದು. ಭಿವಂಡಿ ಮತ್ತು ಜಲಗಾಂವ್‌ನಲ್ಲಿ ಜೀವನದುದ್ದಕ್ಕೂ ಜೊತೆಗಾರರಾಗಿದ್ದವರೇ, ಪರಸ್ಪರ ಮಿತ್ರರೇ ಒಬ್ಬರು ಇನ್ನೊಬ್ಬರ ಜೀವ ತೆಗೆದರು. ಒಬ್ಬರು ಇನ್ನೊಬ್ಬರ ಪ್ರಾಣ ತೆಗೆಯುವುದಕ್ಕೆ ಮತ್ತು ರಕ್ತ ಕುಡಿಯುವುದಕ್ಕೆ ಸಿದ್ಧರಾದರು. ನಾವು ಮನುಷ್ಯರು ಎಂಬುದನ್ನು ಇವರೆಲ್ಲ ಹೇಗೆ ಮರೆತರು? ಮನುಷ್ಯ ಇಂತಹ ರಾಕ್ಷಸ ಆಗಲು ಹೇಗೆ ಸಾಧ್ಯ? ಪಶುಗಳೂ ಹೀಗಿರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಪ್ರಾಣಿಗಳು ಎಂದಿಗೂ ಹೀಗೆ ವರ್ತಿಸಲಾರವು. ಆದ್ದರಿಂದ ನಾನು ಪ್ರಾಣಿಗಳ ಉಪಮೇಯನ್ನು ಕೊಡುವುದಿಲ್ಲ. ಆ ಮುಗ್ಧಜೀವಿಗಳ ಅವಮಾನ ಮಾಡಕೂಡದು. ಒಂದು ಸಿಂಹ ಇನ್ನೊಂದು ಸಿಂಹವನ್ನು ಮೋಸಮಾಡಿ ಈ ರೀತಿ ಕೊಲೆ ಮಾಡುವುದೆಂದು ನನಗೆ ಅನ್ನಿಸುವುದಿಲ್ಲ. ಸಿಂಹ

ಎಷ್ಟೇ ಕ್ರೂರಿಯಾಗಿದ್ದಿರಬಹುದು. ಕುರಿಗಳನ್ನು ಕೂಡ ಹೀಗೆ ಸಾಯಿಸುವುದಿಲ್ಲ. ಯಾವ ಪ್ರಕಾರದ ಘಟನೆಗಳು ಅಹಮದಾಬಾದಿನ ಭಿವಂಡಿಯಲ್ಲಿ ಅಥವಾ ಜಲಗಾಂವ್‌ನಲ್ಲಿ ಆದವೋ ಅವುಗಳ ಹಿಂದೆ ಯಾವ ಪ್ರೇರಣೆ ಇದ್ದಿರಬಹುದು? ನಕ್ಸಲೀಯರ ಪ್ರೇರಣೆ ಕರುಣೆಯದಾದರೂ ಕೆಲಸ ಆಸುರೀಯಾಗಿದೆ ಎಂದು ನಿಮಗೆ ನಾನು ಹೇಳಿದೆ. ಅಲ್ಲಿ ಮೇಘಾಲಯದಲ್ಲಿ ಅಥವಾ ಅಮೇರಿಕಾದಲ್ಲಿ ಪ್ರೇರಣೆ ವಂಶಕ್ಕೆ ಸಂಬಂಧಿಸಿದ್ದಾಗಿದೆ, ಜಾತಿಯದ್ದಾಗಿದೆ. ಇನ್ನು ಇಲ್ಲಿ ಇದಕ್ಕೆ ಪ್ರೇರಣೆಯಾವುದು? ಇದಕ್ಕೆ ಧರ್ಮವು ಪ್ರೇರಣೆ ಎಂದು ಜನ ಹೇಳುತ್ತಾರೆ. ಧರ್ಮಪ್ರೇರಿತ ಪರಿಣಾಮ ಇದು ಎಂದು ಹೇಳುತ್ತಾರೆ! ಅಂದರೆ ಧರ್ಮದಲ್ಲಿ ಮಾನವತೆ ಉಳಿದಿಲ್ಲ ಎಂಬುದು ಸ್ಪಷ್ಟವಾದಂತಾಯಿತು.

ಈ ಘಟನೆಗಳು ಇಂದಿನ ಸಮಸ್ಯೆಗಳನ್ನು ಸೂಚಿಸುವಂತಹವಾಗಿವೆ, ಉಪಲಕ್ಷಣಾತ್ಮಕವಾಗಿವೆ. ಈ ನಾಲ್ಕು ಸಮಸ್ಯೆಗಳು ನಮ್ಮ ದೇಶದಲ್ಲಿವೆ ಮತ್ತು ಈ ನಾಲ್ಕನ್ನು ನಾವು ಬಿಡಿಸಬೇಕಿದೆ. ನಮ್ಮ ಆಗ್ರಹವು ಎಂತಹುದು? ಈ ಸಮಸ್ಯೆಗಳನ್ನು ನಮ್ಮ ಪದ್ಧತಿಯಿಂದ ಬಿಡಿಸಬೇಕೆಂಬುದಾಗಿದೆ. ಪದ್ಧತಿಯ ಆಗ್ರಹವನ್ನು ಮೊದಲು ಬಿಟ್ಟುಬಿಡಿ ಎಂಬುದು ನನ್ನ ನಿವೇದನೆ. ಈ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇಷ್ಟು ಮಾತ್ರ ಚಿಂತೆಯಿರಲಿ-ಪದ್ಧತಿಗಾಗಿ ಆಗ್ರಹ ಇಟ್ಟುಕೊಳ್ಳಬೇಡಿ.

ಪದ್ಧತಿಯ ಆಗ್ರಹದಲ್ಲಿ ಏನೆಲ್ಲಾ ಸೇರುತ್ತದೆ? ಅನುಶಾಸನಿಕ ಸದಾಚಾರ, ಔಪಚಾರಿಕ ಸದಾಚಾರ, ವಿಹಿತ ಆಚರಣೆ. ಧರ್ಮದಲ್ಲಿ ಕೊನೆಯ ಆಚರಣೆ ಭಾಗ ಎಲ್ಲವುದಕ್ಕಿಂತ ದೊಡ್ಡದಾಗಿದೆ. ನನ್ನ ಅಜ್ಜ ಒಂದು ಮಾತನ್ನು ಹೇಳುತ್ತಿದ್ದರು. 'ಒಂದು ಸಲ ಒಬ್ಬ ಹೆಂಗಸು ಪಕ್ಕದ ಮನೆಗೆ ಮೊಸರು ಕೇಳಲು ಹೋದಳು. ಆ ಮನೆಯ ಸೊಸೆ ಮೊಸರಿಲ್ಲವೆಂದು ಹೇಳಿದಳು. ಆದ್ದರಿಂದ ಈ ಹೆಂಗಸು ಹಿಂದಿರುಗುತ್ತಿದ್ದಳು. ಆ ಸೊಸೆಯ ಅತ್ತೆ ಮನೆಯ ಹೊರಗೆ ಭೇಟಿಯಾದಳು. ಅತ್ತೆ ಕೇಳಿದಳು"ಎಲ್ಲಿಂದ ಬರುತ್ತಿದ್ದೀಯೆ?" ಪಕ್ಕದ ಮನೆಯವಳೆಂದಳು "ನಿಮ್ಮ ಮನೆಯಿಂದಲೇ, ಮೊಸರು ಕೇಳುವುದಕ್ಕಾಗಿ ಹೋಗಿದ್ದೆ". ಅತ್ತೆಯ ಪ್ರಶ್ನೆ-"ಏನಾಯಿತು?" "ನಿಮ್ಮ ಸೊಸೆ ಮೊಸರಿಲ್ಲವೆಂದು ಹೇಳಿದಳು". ಆಗ ಅತ್ತೆ ಅಂದಳು-"ನೀನು ನನ್ನೊಂದಿಗೆ ಬಾ" ಆ ಹೆಂಗಸನ್ನು ಕರೆದುಕೊಂಡು ಬಂದದ್ದೇ ಮನೆಯಲ್ಲಿ ತನ್ನ ಪೀಠದ ಮೇಲೆ ಕುಳಿತುಕೊಂಡು ಕೇಳಿದಳು- "ನಿನಗೇನು ಬೇಕು?" "ಮೊಸರು ಬೇಕು". "ನಮ್ಮ ಮನೆಯಲ್ಲಿ ಮೊಸರಿಲ್ಲ". "ಅರೆ, ನಿಮ್ಮ ಸೊಸೆ ಕೂಡ ಇದನ್ನೇ ಹೇಳಿದ್ದಳಲ್ಲಾ! ಮತ್ತು ನೀನು ಕೂಡ ಅದನ್ನೇ ಹೇಳುತ್ತಿದ್ದೀಯಲ್ಲಾ?" ಅತ್ತೆಯೆಂದಳು- "ಆದರೆ ಸೊಸೆ ಹೇಳಿದ್ದು ಅನಧಿಕೃತವಾಗಿತ್ತು, 'ಅನ್ ಅಫಿಷಿಯಲ್ ಇತ್ತು' ಆ ಅಧಿಕಾರ ಅವಳಿಗಿಲ್ಲ!"

'ಧರ್ಮದಲ್ಲಿ ಶಾಸ್ತ್ರವಿಹಿತ ಕರ್ಮ ಮುಖ್ಯವಾಗಿರುತ್ತದೆ. ಶಾಸ್ತ್ರವಿಹಿತ ಕರ್ಮ ಮುಖ್ಯವಾಗಿರುವ ಕಾರಣ ಸಂಘಟಿತ ಧರ್ಮ ಮಾನವತೆಯ ಶತ್ರುವಾಗಿಬಿಟ್ಟಿತು. ಈಗ ಎಂತಹ ಸ್ಥಿತಿ ಇದೆ ಎಂದರೆ ಸಂಘಟಿತ ಧರ್ಮ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಮಾನವತೆಗೆ ಯಾವುದೇ ಅರ್ಥವಿರುವುದಿಲ್ಲ, ಅವಕಾಶವಿರುವುದಿಲ್ಲ.

ಆದ್ದರಿಂದ ಈ ವಿಹಿತ ಸದಾಚಾರವನ್ನು ಜಗತ್ತಿನಿಂದ ಅಳಿಸಿಬಿಡಬೇಕಾಗಿದೆ'. ಹೀಗೆಂದು ತರುಣರು ನಿಶ್ಚಯಿಸಿದ್ದಾರೆ.

ನಾಲ್ಕು ಪ್ರಶ್ನೆಗಳನ್ನು, ನಾಲ್ಕು ಸಮಸ್ಯೆಗಳನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಇವುಗಳಿಗೆ ಉತ್ತರ ಹುಡುಕಬೇಕಾಗಿದೆ. ಉತ್ತರವನ್ನು ಹುಡುಕುವ ಮೊದಲು ಪುನಃ ಒಂದು ಬಾರಿ ಆ ಮೊದಲನೆಯ ಮೂಲ ಪ್ರಶ್ನೆಯನ್ನು ಎತ್ತಿಕೊಳ್ಳೋಣ, ನಂತರ ಉತ್ತರ ಹುಡುಕಲು ಪ್ರಾರಂಭ ಮಾಡೋಣ. ಮೂಲ ಪ್ರಶ್ನೆ ಏನಿತ್ತು? –ಮನುಷ್ಯನಿಗೆ ಏನು ಬೇಕಾಗಿದೆ? ಮನುಷ್ಯನಿಗೆ ಜೀವನ ಬೇಕಾಗಿದೆ. ಜೀವನದ ಅರ್ಥವೇನು? ನಾವು ಮನುಷ್ಯರಂತೆ ಬದುಕುವಂತಾಗಬೇಕು ಮತ್ತು ವ್ಯವಹರಿಸುವಂತಾಗಬೇಕು. ಇದು ಪ್ರತಿಯೊಬ್ಬರಿಗೂ ಬೇಕು. ಇದರೊಂದಿಗೆ ಮತ್ತೇನುಬೇಕು? ಇನ್ನೊಬ್ಬನೂ ಕೂಡ ನನ್ನೊಂದಿಗೆ ಸೇರಿಕೊಳ್ಳಲಿ. ಒಬ್ಬನೇ ಈ ಸಂಸಾರದಲ್ಲಿ ಇರಲು ಸಾಧ್ಯವಿಲ್ಲ. ಮನುಷ್ಯನ ಎರಡನೆಯ ವಿಶೇಷತೆಯಿದು. ದನಕರುಗಳು ಕೂಡ ಒಂಟಿಯಾಗಿ ಬದುಕಲಾರವು. ಅಂತೆಯೇ ಮನುಷ್ಯ ಎಂದೂ ಒಂಟಿಯಾಗಿ ಬದುಕಲಾರ. ಒಂಟಿತನದಲ್ಲಿ ಜೀವನವಿಲ್ಲ. ಏಕಾಂತದಲ್ಲಿ ಮೃತ್ಯು ಸಂಭವಿಸಬಹುದೇ ಹೊರತು ಜೀವನವಲ್ಲ. ಏಕಾಂತದಲ್ಲಿ ಈಶ್ವರನ ದರ್ಶನವಾಗಬಹುದು, ಆದರೆ ಬದುಕುವುದು ಕಷ್ಟ. ಆದರೆ ನಾನು ಏಕಾಂತದಲ್ಲಿ ಬದುಕಬಲ್ಲೆ ಎಂದು ಮನುಷ್ಯ ಹೇಳುತ್ತಾನೆ. ಆ ಏಕಾಂತದಲ್ಲಿ ಕೂಡ ಅವನು ಮನಸ್ಸಿನಲ್ಲಿ ಒಂದು ಭಾವನಾತ್ಮಕ ಸಂಸಾರವನ್ನು ನಿರ್ಮಿಸಿಕೊಳ್ಳುತ್ತಾನೆ. ಅದೊಂದು ಸ್ವತಂತ್ರ ವಿಷಯ. ಈ ವಿಷಯವನ್ನು ಈಗ ಬಿಟ್ಟುಬಿಡುತ್ತೇನೆ. ಒಂದು ಕ್ಷಣದ ಮಟ್ಟಿಗೆ ಹೀಗೆ ತಿಳಿಯಿರಿ; ಕೆಲವು ಜನರು ಏಕಾಂತದಲ್ಲಿ ಇರಲು ಬಯಸುತ್ತಾರೆ, ಇದ್ದೂ ಬಿಡುತ್ತಾರೆ. ಆದರೆ ಅದನ್ನು ಜೀವನವೆಂದು ಹೇಳಲಾಗುವುದಿಲ್ಲ. ಬೇರೆಯವರೊಂದಿಗೆ ಇರುವುದರಲ್ಲಿ ಜೀವನವಿದೆ. ಬೇರೆಯವರೊಂದಿಗೆ ನಾವು ಬದುಕಲು ಸಾಧ್ಯವಾದರೆ ಅದು ಜೀವನ. ಬೇರೆಯವರೊಂದಿಗೆ ಬದುಕಲು ಸಾಧ್ಯವಿಲ್ಲವೆಂದಾದರೆ ಅದು ಜೀವನವಲ್ಲ. ಅಂದರೆ ಇಲ್ಲಿ ಸಂಘರ್ಷ ಬಂತು. ಯುದ್ಧ ಬಂತು. ನನ್ನ ಮರ್ಜಿಗೆ ಅನುಸಾರವಾಗಿ ನಾನು ಬದುಕಲು ಬಯಸುತ್ತೇನೆ. ನನ್ನ ಇಚ್ಛಾನುಸಾರ, ನನ್ನ ಮರ್ಜಿಗೆ ಅನುಸಾರವಾಗಿ ಬದುಕುತ್ತೇನೆ ಎಂಬುದರ ಅರ್ಥ ಎಲ್ಲರೂ ನನ್ನ ಮರ್ಜಿಗೆ ಅನುಸಾರವಾಗಿಯೇ ಬದುಕಲಿ. ನಿಮ್ಮ ಮರ್ಜಿಗೆ ಅನುಸಾರವಾಗಿ ನಾನು ನಡೆಯಬೇಕು ಎಂಬ ಅರ್ಥವಾಯಿತು. ಇದು ಸಂಘರ್ಷ. ಇಲ್ಲಿ ವಿರೋಧ ಬರುತ್ತದೆ. ಇದರಲ್ಲಿ ಮಾರ್ಗ ಹುಡುಕಬೇಕಾಗಿದೆ. ಇದು ಸಂಸ್ಕೃತಿಯ ಹುಡುಕಾಟ. ಬೇರೆ ಜನರೊಂದಿಗೆ ಹೇಗೆ ಬದುಕಬೇಕು ಎಂಬುದೇ ಸಂಸ್ಕೃತಿಯ ಹುಡುಕಾಟ. ಇದಕ್ಕೆ ಭಿನ್ನವಾದ ಬೇರೆ ಸಾಂಸ್ಕೃತಿಕ ಸಮಸ್ಯೆಯಿಲ್ಲ.

ಇದುವರೆಗೆ ಏನಾಗಿದೆ? ಸಧ್ಯಕ್ಕೆ ಜಗತ್ತಿನ ಮಾತನ್ನು ಬಿಡೋಣ. ದೇಶದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡೋಣ. ನಾವು ಪರಸ್ಪರ ನೆರೆಯವರಾಗಿಯೇ ಇದ್ದೇವೆ. ಆದರೆ ಇನ್ನೊಬ್ಬರ ಜೊತೆಯಾಗಿ ಇರಲು ಸಾಧ್ಯವಾಗಿಲ್ಲ. ಇದು

ಇಂದಿನವರೆಗಿನ ಇತಿಹಾಸ ಮತ್ತು ನಮ್ಮ ಇತಿಹಾಸದ ಬಗ್ಗೆ ನಮಗೆ ತುಂಬ ಅಭಿಮಾನವಿದೆ. ಏಕೆಂದರೆ ನಮ್ಮಲ್ಲಿ ಜಾತಿ ಸಂಸ್ಥೆ ಇದೆ. ಆದ್ದರಿಂದ ನಾವು ಎರಡನೆಯವರ ಬದುಕಿನಲ್ಲಿ ಮಧ್ಯೆ ಪ್ರವೇಶಿಸಿಲ್ಲ. ಎರಡನೆಯವರ ಬದುಕಿನಲ್ಲಿ ಹಸ್ತಕ್ಷೇಪ ಮಾಡಿಲ್ಲ. ಇದರ ಬಗ್ಗೆ ಎಷ್ಟೊಂದು ದೊಡ್ಡ ಅಭಿಮಾನ! ನಿಮಗೆ ಬಾಯಾರಿಕೆಯಾಗಿದೆ, ಒದ್ದಾಡುತ್ತಿದ್ದೀರಿ, ಗೋಳಾಡುತ್ತಿದ್ದೀರಿ, ಸಾಯುವಂತಾಗಿದೆ. ನಾನುಲ ಆಗ ಏನು ಹೇಳುತ್ತೇನೆ? ನಾನು ಎರಡನೆಯವರ ಜೀವನದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಇದು ನಮ್ಮ ನೀತಿಯಾಗಿದೆ. ಇದರಿಂದ ಒಂದು ಲಾಭವಾಯಿತು. ಪ್ರತ್ಯಕ್ಷ ಜಗಳ ಕಡಿಮೆಯಾದವು. ಪ್ರತ್ಯಕ್ಷ ಅತ್ಯಾಚಾರ ಕಡಿಮೆಯಾದವು. ಆದರೆ ಒಂದು ದೊಡ್ಡ ನಷ್ಟವಾಯಿತು. ಮನುಷ್ಯ, ಮನುಷ್ಯನೊಂದಿಗೆ ಬದುಕಲಾರದಾದ! ಮನುಷ್ಯನ ಜೀವನದಲ್ಲಿ ಮನುಷ್ಯ ಪ್ರವೇಶ ಪಡೆಯಲು ಸಾಧ್ಯವಾಗಲಿಲ್ಲ. ಒಬ್ಬ ಮನುಷ್ಯನ ಜೀವನದಲ್ಲಿ ಇನ್ನೊಬ್ಬನ ಪ್ರವೇಶ ನಮ್ಮ ದೇಶದಲ್ಲಿ ಸಾಧ್ಯವಾಗಲಿಲ್ಲ. ಆದ್ದರಿಂದ ಎಲ್ಲ ಧರ್ಮಗಳಲ್ಲಿ ಒಂದು ಆದೇಶವಿದೆ– "ನೆರೆಯವರನ್ನು ಪ್ರೀತಿಸು"

"ನೆರೆಹೊರೆಯವರನ್ನು ಪ್ರೀತಿಸು"– ಈ ವಿಧಾನದ ಬಗ್ಗೆ ನನಗೆ ತುಂಬ ಆಶ್ಚರ್ಯವಾಗುತ್ತಿತ್ತು. ಕಾರಣ ಗೊತ್ತಾಗುತ್ತಿರಲಿಲ್ಲ. "ನೆರೆಹೊರೆಯವರನ್ನು ಪ್ರೀತಿಸು" ಎಂಬುದರಲ್ಲಿ ಅಂಥ ವಿಶೇಷ ಮಾತೇನಿದೆ? ಇದನ್ನು ಹೇಳಲು ಧರ್ಮದ ಅಗತ್ಯವೇನಿದೆ? ಎಂದು ಅನಿಸುತ್ತಿತ್ತು. ನನ್ನ ವಯಸ್ಸು ಹೆಚ್ಚಾಗುತ್ತಾಹೋದಂತೆ ಮತ್ತು ವಯಸ್ಸಿನೊಂದಿಗೆ ಸ್ವಲ್ಪ ಬುದ್ಧಿ ಬೆಳೆಯಲಾರಂಭಿಸಿದಾಗ ನೆರೆಯವರನ್ನು ಪ್ರೀತಿಸುವುದು ಕಠಿಣ ಕೆಲಸವೆಂದು ನನಗೆ ಅನ್ನಿಸಿತು. ಈ ಸಂಸಾರದಲ್ಲಿ ಯಾರನ್ನಾದರೂ ಪ್ರೀತಿಸಬಹುದು, ನೆರೆಯವರನ್ನು ಪ್ರೀತಿಸುವುದು ಕಷ್ಟ. ಇದಕ್ಕೆ ಮುಖ್ಯ ಕಾರಣ ನಾವು ನೆರೆಯವರನ್ನು ಆಯ್ಕೆ ಮಾಡಿಕೊಳ್ಳಲಾರೆವು. ನೆರೆಯ ಹೊರೆತನ ನಮ್ಮ ಕೈಯಲ್ಲಿಯ ಮಾತಲ್ಲ. ಅವನು ಯಾರು? ಅವನು ನನ್ನ ಮಿತ್ರ. ಮಿತ್ರ ಹೇಗಾದ? ನಾನು ಮಾಡಿಕೊಂಡೆ. ಇವನು ಯಾರು? ನನ್ನ ಶತ್ರು. ಶತ್ರು ಹೇಗಾದ? ನಾನು ಮಾಡಿಕೊಂಡೆ. ನಾನು ಒಪ್ಪಿದೆ ಆದ್ದರಿಂದ ಮಿತ್ರ, ನಾನು ಒಪ್ಪಲಿಲ್ಲ ಆದ್ದರಿಂದ ಶತ್ರು. ಆದರೆ ಅವನು ನನ್ನ ಮೇಲೆ ಅವಲಂಬಿತನಾಗಿಲ್ಲ. ಅವನು ಇದ್ದಾನೆ, ಆದ್ದರಿಂದ ಇದ್ದಾನೆ. 'ಇದ್ದಾನೆ. ಆದ್ದರಿಂದ ಇದ್ದಾನೆ' ಎಂಬುದರ ಅರ್ಥ, ಯಾವ ರೀತಿ ಪ್ಲೇಗ್ ಇರುತ್ತದೋ ಆರೀತಿ ಅಂದರೆ ಅದರ ಮೇಲೆ ನನ್ನ ಹಿಡಿತವಿಲ್ಲ. ಸತತ ಸಾನ್ನಿಧ್ಯವಿದೆ ಆದರೆ ಅಂತಃಕರಣದ ಯಾವುದೇ ಸಂಬಂಧವಿಲ್ಲ. ಇದು ಸಮಸ್ಯೆ. ನೆರೆಯವನು ಮಿತ್ರ ಹೇಗಾದನು ಎಂಬುದು ಪ್ರಶ್ನೆ. ಹೇಳಿರುವ ಈ ನಾಲ್ಕೈದು ಸಮಸ್ಯೆಗಳ ಸಾಮಾನ್ಯ ರೂಪ ನೆರೆಯವನು ಮಿತ್ರ ಹೇಗಾಗಬಲ್ಲ ಎಂಬುದು. ಇದು "ಕಲ್ಚರಲ್ ಪ್ರಾಬ್ಲಮ್". ಇದಕ್ಕೆ ಸಾಂಸ್ಕೃತಿಕ ಸಮಸ್ಯೆ ಎಂದೆನ್ನುತ್ತಾರೆ. ನನ್ನ ನೆರೆಯವನು ನನ್ನ ಸಖ ಹೇಗಾಗುತ್ತಾನೆ, ಹೇಗಾಗಬಲ್ಲ ಎಂಬುದು ಸಂಸಾರದ ಸಮಸ್ಯೆಯಾಗಿದೆ.

ವಿನೋಬಾರವರ ಇಡೀ ಕಥನ, ಇಡೀ ನಿರೂಪಣೆ ಉಪನಿಷತ್ತಿಗೆ ಸಮಾನವಾಗಿರುತ್ತವೆ. ಸಖ್ಯ ಭಕ್ತಿ ಇಂದಿನ ಯೋಗವೆಂದು ಅವರು ಹೇಳುತ್ತಾರೆ.

ಯಾರು ಮಂತ್ರದ್ರಷ್ಟಾರ ಋಷಿ ಆಗಿರುತ್ತಾರೋ ಅವರ ಶಬ್ದ ಸಹಜ ಸ್ಫೂರ್ತಿದಾಯಕವಾಗಿರುತ್ತವೆ. ಸಮಾಜವಾದದ ಶಬ್ದ 'ಕಾಮ್ರೇಡ್', ಜೊತೆಗಾರ, ಸಂಗಾತಿ. ಯಾವುದೇ ಕಾರಣದಿಂದಲೂ ಸಂಗಾತಿಯಾಗಬಹುದು. ಶ್ರಮದಾನಕ್ಕಾಗಿ ಹೊರಟರೆ ಸಂಗಾತಿ ಇರುತ್ತಾರೆ. ಒಂದೇ ಕಕ್ಷೆಯಲ್ಲಿ ಕುಳಿತುಕೊಂಡರೆ ಸಂಗಾತಿ. ರೈಲೊಂದರ ಡಬ್ಬಿಯಲ್ಲಿ ಕುಳಿತು ಒಂದು ನಿಲ್ದಾಣದಲ್ಲಿ ಇಳಿಯುವುದಿದೆ. ಅದೇ ವಿವಾಹ ನಿಮಿತ್ತವಾಗಿ ಅವರು ಸಂಗಾತಿಗಳಾಗಿ ಉಳಿದರು. ಅವಶ್ಯವಾಗಿ ಸಂಗಾತಿಗಳು. ಆದರೆ ಸಂಗಾತಿ ಸಂಸ್ಕೃತಿಯ ನಿಜವಾದ ಘಟಕವಲ್ಲ. ಏಕೆಂದರೆ ಸಂಗಾತಿತನ ಯಾವುದೋ ಪ್ರಯೋಜನದ ಮೇಲೆ ನಿರ್ಭರವಾಗಿರುತ್ತದೆ. ಸಾಂಸ್ಕೃತಿಕ ಜೀವನದ ಘಟಕ ಮಿತ್ರ, ಸಖ. ಈ ಸಖ್ಯ ಭಕ್ತಿಯ ಯೋಗ, ಆ 'ಕಾಮ್ರೇಡ್‌ಷಿಪ್'ನ ಮುಂದಿನ ಹೆಜ್ಜೆ. ಸಮಾಜವಾದ, ಸಾಮ್ಯವಾದ 'ಕಾಮ್ರೇಡ್‌ಷಿಪ್'ನ ವರೆಗೆ ಬಂದವು. ಸಮಸ್ತ ಮನುಷ್ಯರು ನಮ್ಮ ಸಂಗಾತಿಗಳೆಂದು ಅದು ಹೇಳುತ್ತದೆ. ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲ. ನಾವೆಲ್ಲರೂ ಸಮಾನರು, ಸಂಗಾತಿಗಳು. ಎಲ್ಲರೂ 'ಕಾಮ್ರೇಡ್ಸ್'. ಪತ್ನಿ 'ಕಾಮ್ರೇಡ್', ಅಣ್ಣ 'ಕಾಮ್ರೇಡ್', ತಾಯಿ 'ಕಾಮ್ರೇಡ್', ಗುರು 'ಕಾಮ್ರೇಡ್'ಇದ್ದಾರೆ. ಇಲ್ಲಿಯವರೆಗೆ ಬಂತು ಸಮಾಜವಾದ, ಸಾಮ್ಯವಾದ. ಆದರೆ 'ಕಾಮ್ರೇಡ್‌ಷಿಪ್' ಪರ್ಯಾಪ್ತವಲ್ಲ. ಅದು ಅಗತ್ಯವಾಗಿದೆ, ಆದರೆ ಬೇಕಾಗಿರುವಷ್ಟಲ್ಲ. ಇನ್ನೊಂದು ಹೆಜ್ಜೆ ಮುಂದೆ ಹೋಗಬೇಕಾಗುವುದು. ಆ ಹೆಜ್ಜೆ ಎಂತಹುದು? ಸಖ್ಯದ್ದು. ಹಾಗಾದರೆ ಬಂಧುತ್ವ ಎಂದು ಏಕೆ ಅನ್ನುವುದಿಲ್ಲ? ಸಮಾಜವಾದಿಗಳು ಸಂಗಾತಿ ಎಂಬ ಶಬ್ದವನ್ನು ಏಕೆ ಚಲಾವಣೆಗೆ ತಂದರು? ಬಂಧುತ್ವ ಶಬ್ದವು ಪ್ರಾಚೀನವಾಗಿದೆ. ವಿಶ್ವ ಬಂಧುತ್ವ ಎಂಬ ಶಬ್ದದಂತೆ ಅದೂ ಕೂಡ ಪ್ರಾಚೀನವಾದ ಶಬ್ದ. ಬಂಧುತ್ವದಲ್ಲಿ ರಕ್ತ ಸಂಬಂಧದ ವಾಸನೆ ಬರುತ್ತದೆ. ವಾಸನೆ ಎಂಬ ಸೌಮ್ಯ ಶಬ್ದವನ್ನು ಉಪಯೋಗಿಸುತ್ತಿದ್ದೇನೆ. ಕಮ್ಯೂನಿಸ್ಟ್ ದುರ್ವಾಸನೆ ಬರುತ್ತದೆ ಎಂದು ಹೇಳುತ್ತಾನೆ. ಅವನಿಗೆ ರಕ್ತದ ದುರ್ವಾಸನೆ ಬರುತ್ತದೆ. ಅವನ ಪ್ರಾಣೇಂದ್ರಿಯ ಚುರುಕಾಗಿದೆ. ಬಂಧುತ್ವ ಶಬ್ದದಲ್ಲಿ ರಕ್ತದ ದುರ್ವಾಸನೆ ಇರುವುದರಿಂದ ನಾವು ಬಂಧು ಅಲ್ಲ ಸಂಗಾತಿಗಳು. ಈ ರೀತಿಯಲ್ಲಿ ಬಂಧುತ್ವ ಇಂದು ಸಂಸಾರದಲ್ಲಿ ಅತ್ಯಂತ ದೊಡ್ಡ ಮತ್ತು ಮೊಟ್ಟಮೊದಲನೆಯ ಸಮಸ್ಯೆ. ಹಾಗಿದ್ದಲ್ಲಿ ನೆರೆಯವನನ್ನು ಹೇಗೆ ಮಿತ್ರನನ್ನಾಗಿ ಮಾಡಿಕೊಳ್ಳುವುದು?

ಮಿತ್ರರೇ, ಶರೀರದಿಂದ ಹತ್ತಿರವಿದ್ದರೂ ಮನಸ್ಸಿನಿಂದ ಒಂದು ವೇಳೆ ಹತ್ತಿರವಿರಲಿಲ್ಲವೆಂದರೆ ಅದಕ್ಕೆ ಸಮಾನವಾದ ಭಯಂಕರ ಸ್ಥಿತಿ ಬೇರೊಂದಿಲ್ಲ. ಮನಸ್ಸಿನಿಂದ ದೂರವಿದ್ದು ಶಾರೀರಿಕವಾಗಿ ಹತ್ತಿರ ಬಂದರೆ ಆಗ ಹೊಡೆದಾಟವಲ್ಲದೆ ಬೇರೇನೂ ಆಗುವುದಿಲ್ಲ. ಆದ್ದರಿಂದಲೇ ಮನುಷ್ಯನ ಮನಸ್ಸನ್ನು ಬದಲಾಯಿಸಬೇಕೆಂದು ಗಾಂಧೀಜಿ ಹೇಳಿದರು. ಇದರ ಹೆಸರೇ ಹೃದಯ ಪರಿವರ್ತನೆ.

– ಅನು : ಸು.ಕೌ.

* * *

ಯುವ ಸಮಾಜಸೇವಕನಾಗಿ ಸುಂದರಲಾಲ್ ಬಹುಗುಣ

ಮೂಲ – ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

ಅಧ್ಯಾಯ–೩

ಲಾಹೋರ್ ಮತ್ತು ಸಿಕ್ಕನ್ವಾಲಾ ಪ್ರವಾಸದ ನಂತರ ಸುಂದರ ಲಾಲರು ಘಢವಾಲ್ ಪ್ರದೇಶಕ್ಕೆ ೧೯೪೭ರಲ್ಲಿ ಬಂದರು. ಡೆಹರಾಡೂನ್‌ಗೆ ಬರುತ್ತಿದ್ದಂತೆಯೇ ಪ್ರಜಾಮಂಡಲದ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ದೇಶವಿಭಜನೆಯ ಕಾರಣದಿಂದ ಬಂದಿದ್ದ ನಿರಾಶ್ರಿತರ ಸಹಾಯದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸ್ವಲ್ಪ ಸಮಯದಲ್ಲಿಯೇ ಅವರು ಪ್ರಜಾಮಂಡಲದ ಪ್ರಚಾರ ಕಾರ್ಯದರ್ಶಿಯಾಗಿ ನಿಯುಕ್ತಿಗೊಂಡರು. ಈ ಜವಾಬ್ದಾರಿಯ ನಿಮಿತ್ತ ಅವರು ಆಗಾಗ್ಗೆ ದೆಹಲಿಗೆ ಹೋಗಿಬರಬೇಕಿತ್ತು. ಆಗ ರಾಷ್ಟ್ರೀಯ ಸರ್ಕಾರ ರೂಪುಗೊಳ್ಳುತ್ತಿತ್ತು. ಸರ್ಕಾರದ ಅಧಿಕಾರಿಗಳೊಂದಿಗೆ ಮತ್ತು ಅನೇಕ ಪ್ರಮುಖ ವೃತ್ತ ಪತ್ರಿಕೆಗಳೊಂದಿಗೆ ಅವರ ಸಂಪರ್ಕ ಬೆಳೆಯಿತು. ಆ ವರ್ಷದ ಆಗಸ್ಟ್ ತಿಂಗಳಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತಾದರೂ ತೆಹರಿ ಘಢವಾಲ್ ಪ್ರದೇಶ ತೆಹರಿ ದೇಶೀಯ ಸಂಸ್ಥಾನದ ಅಧೀನದಲ್ಲಿಯೇ ಉಳಿಯಿತು. ಸುಂದರ್ ಲಾಲ್ ಇಲ್ಲಿಗೆ ಬಂದ ಕಾಲದಲ್ಲಿ ದೇಶೀಯ ಸಂಸ್ಥಾನದ ವಸಾಹತುಶಾಹಿ ವಿರೋಧಿ ಚಳುವಳಿ ತನ್ನ ಉತ್ತುಂಗಕ್ಕೆ ಏರಿತ್ತು. ಸುಂದರ್ ಲಾಲರಿಗೆ ತಮ್ಮ ಸ್ವಂತ ಊರಾದ ತೆಹರಿಗೆ ಹಿಂದಿರುಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬೇಕೆಂಬ ಇಚ್ಛೆಯಾಯಿತು. ಹಾಗೆ ಬಂದಾಗ ಸತ್ಯಾಗ್ರಹದಲ್ಲಿ ಅದು ಅವರ ಮೊದಲ ಪ್ರಯೋಗವಾಗಿತ್ತು. ತೆಹರಿಯ ಮುಖ್ಯ ಪ್ರವೇಶ ದ್ವಾರದಲ್ಲಿ ಭಾಗೀರಥಿ ನದಿಯ ಮೇಲೆ ಕಬ್ಬಿಣದ ಸೇತುವೆಯಿತ್ತು. ದೇಶೀಯ ಸಂಸ್ಥಾನದ ಪೋಲಿಸರು ಆ ಸೇತುವೆಯನ್ನು ಇನ್ನೂ ಕಾಯುತ್ತಿದ್ದರು. ಕೆಲವು ವರ್ಷಗಳ ಹಿಂದೆ ತಮ್ಮ ಕಾವಲುಗಣ್ಣಿನಿಂದ ತಪ್ಪಿಸಿಕೊಂಡಿದ್ದ ಯುವ ಸುಂದರಲಾಲರನ್ನು ಮರೆತಿರಲಿಲ್ಲ. ತೆಹರಿ ಊರಿನಲ್ಲಿ ಪ್ರವೇಶ ಮಾಡಲು ಪೋಲಿಸರು ಸುಂದರಲಾಲರಿಗೆ ಅನುಮತಿ ಕೊಡಲಿಲ್ಲ. ಅದಕ್ಕೆ ಪ್ರತಿಯಾಗಿ ಸುಂದರ್ ಲಾಲ್ ಉಪವಾಸ ಕೈಗೊಂಡರು. ಆ ಸೇತುವೆಯ ಬಳಿ ಒಂದು ವಾರ ಅವರು ಸತ್ಯಾಗ್ರಹಕ್ಕೆ ಕುಳಿತರು. ಆ ಸಮಯದಲ್ಲಿ ಊರಿನ ಮತ್ತು ಪಕ್ಕದ ಹಳ್ಳಿಗಳ ಜನರು ಅವರನ್ನು ಭೇಟಿ ಮಾಡಲು ಬಂದರು. ತೆಹರಿಯಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದನ್ನು ಸುಂದರಲಾಲರಿಗೆ ತಿಳಿಸುತ್ತಿದ್ದರು. ದೇಶಿಯ ಸಂಸ್ಥಾನದ ದಬ್ಬಾಳಿಕೆಯ ವಿರುದ್ಧ ಜನರ ಪ್ರತಿಭಟನೆ ಬೆಳೆಯುತ್ತ ನಡೆದಿತ್ತು. ಸ್ಕಲಾನ್ ಪ್ರದೇಶದಲ್ಲಿ ಜನತೆಯ ಉಗ್ರ ಚಳುವಳಿ

ಪ್ರಾರಂಭವಾಗಿತ್ತು. ತೆಹರಿಯ ನಗರದಲ್ಲಿ ವೀರೇಂದ್ರದತ್ ಸ್ಕಲಾನಿಯವರಂಥ ಯುವಕರು ಆ ರಾಜ್ಯದ ಸರ್ಕಾರದ ವಿರುದ್ಧ ಜನರನ್ನು ಸಂಘಟಿಸುತ್ತಿದ್ದರು. ಒಂದು ವಾರದ ಉಪವಾಸದ ನಂತರ ಈ ಯುವಕ ತುಂಬ ದುರ್ಬಲನಾಗಿದ್ದಾನೆ ಮತ್ತು ಇನ್ನು ಪ್ರತಿಭಟನೆಯನ್ನು ಮುಂದುವರೆಸಲಾರ ಎಂದು ಪೋಲಿಸರು ಭಾವಿಸಿದರು. ತತ್ಪರಿಣಾಮವಾಗಿ ಸುಂದರ್ ಲಾಲ್ ಪೋಲಿಸರ ಕಣ್ಣು ತಪ್ಪಿಸಿ ತೆಹರಿ ಊರಿನೊಳಕ್ಕೆ ವಿಜಯೀ ಮನೋಭಾವದಿಂದ ಪ್ರವೇಶ ಮಾಡಿ ಆ ರಾಜ್ಯದ ರಾಜನ ವಿರುದ್ಧದ ಹೋರಾಟದಲ್ಲಿ ಭಾಗವಹಿಸಲಾರಂಭಿಸಿದರು. ಸತ್ಯಾಗ್ರಹದಲ್ಲಿಯ ಮೊದಲ ಈ ಯಶಸ್ಸು ಭವಿಷ್ಯದ ಅವರ ಅಹಿಂಸಾತ್ಮಕ ಹೋರಾಟಗಳಿಗೆ ದೃಢಮನಸ್ಕರನ್ನಾಗಿಸಿತು. ಮುಂದೆ ೧೯೪೮ರ ಜನವರಿಯಲ್ಲಿ ತೆಹರಿ ನಗರದಲ್ಲಿ ಬಹು ವ್ಯಾಪಕ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಇದಾದ ಸ್ವಲ್ಪ ದಿನಗಳಲ್ಲಿಯೇ ಆ ದೇಶೀ ಸಂಸ್ಥಾನದ ಆಡಳಿತ ಕೊನೆಗೊಂಡಿತು. ಮಾರನೆಯ ವರ್ಷ ಆಗಸ್ಟ್ ತಿಂಗಳಲ್ಲಿ ತೆಹರಿ ಘಢವಾಲ್ ಸ್ವತಂತ್ರ ಭಾರತದಲ್ಲಿ ವಿಲೀನವಾಗಿ ಉತ್ತರ ಪ್ರದೇಶ ರಾಜ್ಯದ ಒಂದು ಭಾಗವಾಯಿತು.

ದೇಶೀ ಸಂಸ್ಥಾನದಿಂದ ಬಿಡುಗಡೆಯ ನಂತರ ಸ್ವಾತಂತ್ರ್ಯ ಹೋರಾಟದಲ್ಲಿಯ ಸುಂದರಲಾಲರ ಜೊತೆಗಾರರು ರಾಜ್ಯ ಪ್ರಜಾಮಂಡಲದ ಸಾಮಾನ್ಯ ಕಾರ್ಯದರ್ಶಿಯನ್ನಾಗಿ ಸುಂದರಲಾಲರನ್ನು ಆಯ್ಕೆ ಮಾಡಿದರು. ಈ ಪದವಿಯಲ್ಲಿ ಕೆಲಸ ಮಾಡುವಾಗ ಸಮಾಜದ ಹಲವಾರು ಗಂಭೀರವಾದ ಸಾಮಾಜಿಕ ವಿಷಯಗಳತ್ತ ಅವರು ಗಮನ ಹರಿಸಬೇಕಾಯಿತು. ಪ್ರಜಾಮಂಡಲದ ಕಚೇರಿಗಳು ಅಸ್ಪೃಶ್ಯರ ಕೇರಿಯ ಬಳಿಯೇ ಇದ್ದವು. ಯಾವುದೇ ಒಬ್ಬ ವ್ಯಕ್ತಿಯನ್ನು ಅಸ್ಪೃಶ್ಯನನ್ನಾಗಿ ನೋಡುವುದನ್ನು ಗಾಂಧೀಜಿ ಬಲವಾಗಿ ವಿರೋಧಿಸುತ್ತಿದ್ದರು. ಗಾಂಧೀಜಿ ಅವರನ್ನು ಹರಿಜನ ದೇವರ ಮಕ್ಕಳೆಂದು ಕರೆದರು. ತೆಹರಿಯಲ್ಲಿ ಈ ಜನರನ್ನು ನಗರದ ಸ್ವಚ್ಛತೆಯ ಕೆಲಸಕ್ಕೆ ನಿಯುಕ್ತಿ ಮಾಡಿಕೊಂಡಿದ್ದರು. ಸಂಜೆ ಹೊತ್ತಿನಲ್ಲಿ ಇವರು ಮದ್ಯಪಾನ ಮಾಡಿ ಕಾದಾಡುವುದನ್ನು ಸುಂದರಲಾಲರು ಗಮನಿಸಿದರು. ಸ್ವಚ್ಛತಾ ಕೆಲಸದ ನಂತರ ಅವರಿಗಾಗಿರಬಹುದಾದ ಆಯಾಸದ ಬಗ್ಗೆ ಸುಂದರಲಾಲರಿಗೆ ಸಹಾನುಭೂತಿಯಿತ್ತು. ಅಸ್ಪೃಶ್ಯರು ತಾವು ಸ್ವಚ್ಛಗೊಳಿಸಿದ ಗಲೀಜು ಮತ್ತು ದಣಿವಿನ ಕೆಲಸ ಮರೆಯಲು ಸಂಜೆ ವೇಳೆ ಕುಡಿಯುತ್ತಾರೆ ಎಂದು ಸುಂದರಲಾಲರಿಗೆ ಗೊತ್ತಾಯಿತು. ಆದರೆ ಕುಡಿದಾದ ಮೇಲೆ ತಮ್ಮೊಳಗೇ ಹೊಡೆದಾಡುವುದನ್ನು ಸುಂದರಲಾಲ್ ನೋಡಿದರು. ಅನೇಕ ಸಲ ಅವರು ಹೆಂಡದ ಸೀಸಗಳನ್ನು ಒಬ್ಬರು ಇನ್ನೊಬ್ಬರ ತಲೆಗೆ ಹೊಡೆದು ಗಾಯ ಮಾಡಿಕೊಳ್ಳುವುದನ್ನು ನೋಡಿದರು. ಅವರ ಈ ಪಾಡು ಸುಂದರಲಾಲರನ್ನು ತುಂಬ ಚಿಂತೆಗೀಡು ಮಾಡಿತು. ಈ ಸಮಸ್ಯೆ ಬಗೆಹರಿಸಲು ಅವರೊಂದು ಮಾರ್ಗ ಹುಡುಕಿದರು. ಮಹಾತ್ಮಾ ಗಾಂಧೀಯವರ ಜನ್ಮ ದಿನೋತ್ಸವದ ಒಂದು ಸಂದರ್ಭದಲ್ಲಿ ರಾಜ್ಯ ಸರ್ಕಾರವು ಸುಂದರಲಾಲರಿಗೆ ಒಂದು ನೂರು ರೂಪಾಯಿಗಳನ್ನುಕಳುಹಿಸಿತು. ಪ್ರಜಾ ಮಂಡಲದ ಕಾರ್ಯದರ್ಶಿಯಾಗಿ ಅವರು ಭಂಗಿಗಳಲ್ಲಿ ಸಿಹಿ ಹಂಚಬೇಕಾಗಿತ್ತು.

ಸುಂದರಲಾಲ್ ಆ ದಿನ ಹರಿಜನರ ಕೇರಿಗೆ ಹೋದರು. ಅಲ್ಲಿಯ ಜನರನ್ನು ಭೇಟಿ ಮಾಡಿದರು. ಅವರೊಂದಿಗೆ ಕುಳಿತುಕೊಂಡರು. ಐವತ್ತು ರೂಪಾಯಿಗಳಿಗೆ ಸಿಹಿ ಖರೀದಿಸಿ ಅವರಿಗೆ ಹಂಚಿದರು. ಇನ್ನು ಉಳಿದ ಐವತ್ತು ರೂಪಾಯಿಗಳಿಗೆ ಒಂದು ದೀಪ ಮತ್ತು ಅವರೆಲ್ಲ ಕುಳಿತುಕೊಳ್ಳಲು ಒಂದು ಕಂಬಳಿ ಖರೀದಿಸಿದರು. ಈ ಸರಳ ಸೌಕರ್ಯದೊಂದಿಗೆ ಸಂಜೆಯ ವೇಳೆಗೆ ಅವರೊಂದಿಗೆ ಸಭೆ ನಡೆಸಲು ಪ್ರಾರಂಭಿಸಿದರು. ಈ ಸಭೆಗಳು ಪ್ರಾರ್ಥನಾ ಸಭೆಗಳಾಗಿದ್ದವು. ನಿಧಾನವಾಗಿ ಸಭೆಗಳಲ್ಲಿಯ ಜನರ ಸಂಖ್ಯೆ ಹೆಚ್ಚಾಗುತ್ತಾ ಬಂತು. ಸಭೆಗಳು ಜನಪ್ರಿಯವಾದವು. ಈ ಭಜನಾ ಸಭೆಗಳಲ್ಲಿ ಅಲ್ಲಿಯ ಎಲ್ಲ ಜನರೂ ಸೇರುತ್ತಿರಲಿಲ್ಲ.

ಮೇಲ್ವರ್ಗದ ಕೆಲವು ಜನರು ಸುಂದರಲಾಲರ ಮೇಲೆ ಕೋಪಿಸಿಕೊಂಡರು. ಸುಂದರಲಾಲರು ಹರಿಜನರೊಂದಿಗೆ ಕುಳಿತುಕೊಳ್ಳುವುದು ಮತ್ತು ಮಾತನಾಡುವುದು ಮೇಲ್ವರ್ಗದ ಜನರಿಗೆ ಇಷ್ಟವಾಗಲಿಲ್ಲ. ಕ್ರಮೇಣ ಸಭೆಯ ಗಾತ್ರ ಬೆಳೆದಂತೆ ಬೇರೆ ಜಾತಿಯ ಜನರೂ ಅವುಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಆ ಸಭೆಗಳು ವಿಸ್ತೃತ ಸಮಾಜದ ಭೇಟಿಯ ಕೇಂದ್ರವಾಗಿ ಪರಿಣಮಿಸಿದವು. ಕಾಲಕ್ರಮೇಣ ಈ ಸಭೆಯ ಸ್ಥಳಗಳು ಹರಿಜನರಿಗಾಗಿ ರಾತ್ರಿ ಪಾಠಶಾಲೆಗಳಾಗಿ ರೂಪುಗೊಂಡವು.

ತೆಹರಿ ಊರಿನಲ್ಲಿ ಒಂದು ಪದವಿಪೂರ್ವ ಕಾಲೇಜು, ಒಂದು ಪ್ರೌಢಶಾಲೆ ಇದ್ದವು. ಅವುಗಳಲ್ಲಿ ಕೇವಲ ಮೇಲ್ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿತ್ತು. ಆದರೆ ಅಲ್ಲಿಯ ಮಹಾರಾಜರ ಆಸ್ಥಾನದಲ್ಲಿ ಬಟ್ಟೆ ಹೊಲಿಯುತ್ತಿದ್ದ ಒಬ್ಬ ವ್ಯಕ್ತಿ ತನ್ನ ಮಗನಿಗೆ ಆ ಶಾಲೆಯಲ್ಲಿ ಪ್ರವೇಶ ಸಿಗುವಂತೆ ಮನವಿ ಮಾಡಿಕೊಂಡ. ಅವನ ಊರು ನರೇಂದ್ರ ನಗರವಾಗಿತ್ತು. ಅಲ್ಲಿದ್ದ ಶಾಲೆಯಲ್ಲಿ ಎಂಟನೇ ತರಗತಿಯವರೆಗೆ ಮಾತ್ರ ಓದಬಹುದಾಗಿತ್ತು. ಉನ್ನತ ವ್ಯಾಸಂಗಕ್ಕೆ ತೆಹರಿಗೆ ಹೋಗಬೇಕಿತ್ತು. ಜಾತಿ ಪದ್ಧತಿಯ ಕಾರಣದಿಂದಾಗಿ ಊಟದ ಸಮಯದಲ್ಲಿ ಬೇರೆ ಹುಡುಗರೊಂದಿಗೆ ಆ ದರ್ಜಿಯ ಹುಡುಗನಿಗೆ ಕುಳಿತುಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ. ಆದುದರಿಂದ ಪ್ರತಿ ದಿನ ಆ ಹುಡುಗ ಹೊರಗಡೆ ಊಟ ಖರೀದಿಸಬೇಕಾಗಿತ್ತು. ತೆಹರಿ ಪ್ರದೇಶದಲ್ಲಿ ಜಾತಿ ಭೇದಭಾವ ಕೇವಲ ಭಂಗಿಗಳು ಮತ್ತು ಚಮ್ಮಾರರಿಗೆ ಸೀಮಿತವಾಗಿರದೆ ದರ್ಜಿಗಳು ಮತ್ತು ಬಡಗಿ ಜನಾಂಗದವರಿಗೂ ಅನ್ವಯಿಸುತ್ತಿತ್ತು. ಇದರ ಹಿಂದೆ ಇದ್ದ ಉದ್ದೇಶ ಮೇಲ್ವರ್ಗದ ಜನರಿಗೆ ಕೆಳವರ್ಗದ ಜನರನ್ನು ತಮ್ಮ ಸೇವೆಯಲ್ಲಿ ಇರಿಸಿಕೊಳ್ಳಬೇಕೆಂಬುದೇ ಆಗಿತ್ತು. ಅವರನ್ನು ಕೀಳು ಜಾತಿಯವರೆಂದೇ ಭಾವಿಸಲಾಗಿತ್ತು. ಅವರನ್ನು ಮುಟ್ಟಬಹುದಾಗಿದ್ದರೂ ಮೇಲ್ವರ್ಗದ ಜಾತಿಯವರ ಜೊತೆ ಊಟಮಾಡಲು ಅವಕಾಶ ಕೊಡುತ್ತಿರಲಿಲ್ಲ. ಅಲ್ಲಿ ಇಬ್ಬರು ಬ್ರಾಹ್ಮಣ ಹುಡುಗರಿದ್ದರು. ಅವರು ಅದೇ ಹಾಸ್ಟೆಲಿನಲ್ಲಿ ವಾಸವಾಗಿದ್ದರು. ಹಿರಿಯ ಹುಡುಗನ ಹೆಸರು ಕಾಮೇಶ್ವರ, ಚಿಕ್ಕವನ ಹೆಸರು ವಿದ್ಯಾಸಾಗರ. ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಚಳುವಳಿಯ ಸಿದ್ಧಾಂತವನ್ನು ಬಲ್ಲವರಾಗಿದ್ದರು. ವಿಶೇಷವಾಗಿ ಗಾಂಧೀಜಿಯವರ ಸಿದ್ಧಾಂತ, ಅಸ್ಪೃಶ್ಯತೆಯ ನಿವಾರಣೆಯ ಕುರಿತಾಗಿ.

ಒಂದು ದಿನ ಅವರು ಹೀಗೆಂದರು, "ಸ್ವಾತಂತ್ರ್ಯ ಮತ್ತು ಸ್ವರಾಜ್ಯದ ಕುರಿತಾದ ಹೊಗಳಿಕೆ ಅರ್ಥವಿಲ್ಲದ್ದು. ಏಕೆಂದರೆ ನಮ್ಮ ಶಾಲೆಯಲ್ಲಿ ಜಾತಿಯ ಕಾರಣಕ್ಕಾಗಿ ಒಬ್ಬ ವಿದ್ಯಾರ್ಥಿಯನ್ನು ಪ್ರತ್ಯೇಕತಾ ಭಾವನೆಯಿಂದ ನೋಡಲಾಗುತ್ತಿದೆ. ಬೇರೆ ವಿದ್ಯಾರ್ಥಿಗಳೊಂದಿಗೆ ಊಟ ಮಾಡಲೂ ಅವನಿಗೆ ಅವಕಾಶ ಕೊಡುತ್ತಿಲ್ಲ. ಆದ್ದರಿಂದ ಆ ದರ್ಜಿಯ ಮಗನನ್ನು ನಮ್ಮೊಂದಿಗೆ ಊಟದ ಮನೆಗೆ ಕರೆದುಕೊಂಡು ಹೋಗಲು ಇಚ್ಛಿಸಿದ್ದೇವೆ. ಆದರೆ ಈ ವಿಚಾರ ಎಲ್ಲರಿಗೂ ಗೊತ್ತಾಗಿದೆ. ನಾವೇನಾದರೂ ಅದೇ ರೀತಿ ಮಾಡಿದಲ್ಲಿ ನಮಗೆ ಹೊಡೆಯುವುದಾಗಿ ಬೆದರಿಕೆ ಹಾಕಿದ್ದಾರೆ." ಇದಕ್ಕೆ ಸುಂದರಲಾಲರ ಪ್ರತಿಕ್ರಿಯೆ, "ಇಬ್ಬರು ಅಲ್ಪ ಸಂಖ್ಯಾತರು ಸೇರಿ ಒಂದು ಪ್ರತಿಭಟನೆಯ ಕ್ರಿಯೆಯಿಂದ ಸಮಾಜದ ಮನೋಭಾವವನ್ನು ಬದಲಾಯಿಸಲು ಸಾಧ್ಯವಿಲ್ಲ. ಗಾಂಧೀಜಿಯವರ ತತ್ವದ ಪ್ರಕಾರ ದ್ವೇಷವನ್ನು ಪ್ರಚೋದಿಸದೇ ಜನರ ಹೃದಯವನ್ನು ಗೆಲ್ಲಬೇಕು ಎಂಬುದಾಗಿದೆ" ಎಂದು ಹೇಳಿದರು. ಜನರ ಹೃದಯವನ್ನು ಗೆಲ್ಲುವುದರ ಮೂಲಕ ಬೇರೆ ವಿದ್ಯಾರ್ಥಿಗಳು ಕೂಡ ಸಾಮಾಜಿಕ ಅನ್ಯಾಯದ ಬಗ್ಗೆ ತಿಳಿಯುವಂತೆ ಆ ಇಬ್ಬರು ಯುವಕರು ಮಾಡಬಹುದೆಂದು ಸಲಹೆ ಕೊಟ್ಟರು. ಸುಂದರಲಾಲರ ಈ ಸಲಹೆಯಂತೆ ಆ ಪ್ರಗತಿಪರ ಯುವಕರು ತಮ್ಮ ಊಟವನ್ನು ದರ್ಜಿಯ ಹುಡುಗನೊಂದಿಗೆ ಹಾಸ್ಟೆಲ್ ಹೊರಗೆ ಮಾಡಲು ಪ್ರಾರಂಭಿಸಿದರು. ಹೊರಗಡೆ ಬಿಸಿಲಿನಲ್ಲಿ ಕುಳಿತು ಊಟ ಮಾಡುವುದು ಕಷ್ಟವೆಂದು ಅವರಿಗೆ ಅನ್ನಿಸಿತು. ಈ ರೀತಿಯ ಕಷ್ಟವನ್ನು ಕೆಳ ಜಾತಿಯ ಜನರು ಅನೇಕ ತಲೆಮಾರುಗಳಿಂದ ಅನುಭವಿಸುತ್ತಿರುವುದಾಗಿ ಸುಂದರಲಾಲ್ ಅವರಿಗೆ ಹೇಳಿದರು. ನಂತರ ಅವರು ಆ ಯುವ ಪ್ರತಿಭಟನಾಕಾರರನ್ನೂ ಮತ್ತು ದರ್ಜಿಯ ಮಗನನ್ನು ಕಾಂಗ್ರೆಸ್ ಪಾರ್ಟಿಯ ಕಚೇರಿಯಲ್ಲಿ ಬಂದಿರಲು ಹೇಳಿದರು. ಆ ಮೂವರೂ ಸುಂದರಲಾಲ್ ಬಹುಗುಣರವರೊಂದಿಗೆ ಇರಲು ಆರಂಭಿಸಿದರು. ನಂತರ ಈ ವಿದ್ಯಾರ್ಥಿಗಳ ವಾಸಕ್ಕಾಗಿ ಇನ್ನೊಂದು ದೊಡ್ಡ ಮನೆಯನ್ನೂ ಪಡೆದರು. ಅಲ್ಲಿ ಅವರೊಂದಿಗೆ ಬೇರೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಾಸ ಮಾಡಲು ಬಂದರು. ಕ್ರಮೇಣ ಅದು ಎಲ್ಲ ಜಾತಿಯ ವಿದ್ಯಾರ್ಥಿಗಳ ವಸತಿ ಗೃಹವಾಯಿತು. ಅದನ್ನು ಅವರು ಹರಿಜನ ವಿದ್ಯಾರ್ಥಿನಿಲಯ ಎಂದು ಕರೆದರು. ಪ್ರಜಾಮಂಡಲದ ಕಾರ್ಯದರ್ಶಿಯಾಗಿ ಮತ್ತು ತದನಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಒಂದು ಚಿಕ್ಕ ನಿವೇಶನವನ್ನು ಉಚಿತವಾಗಿ ಸುಂದರಲಾಲ್ ಪಡೆಯಲು ಸಾಧ್ಯವಾಯಿತು. ಆ ನಿವೇಶನ ಶಾಲೆ ಮತ್ತು ಕಾಲೇಜುಗಳು ಇರುವ ಪ್ರದೇಶದಲ್ಲಿಯೇ ಇತ್ತು. ಅಲ್ಲಿಯೇ ಸುಂದರಲಾಲ್ ಕೂಡ ಇರುತ್ತಿದ್ದರು. ಎಲ್ಲರೂ ಸೇರಿ ಆ ನಿವೇಶನದಲ್ಲಿ ಒಂದು ಹೊಸ ಹಾಸ್ಟೆಲ್ ಕಟ್ಟಲು ಆರಂಭಿಸಿದರು. ಕಟ್ಟಡವನ್ನು ಕಟ್ಟಲು ಕೂಲಿಗಳನ್ನು ಗೊತ್ತು ಮಾಡಲಾಗಿತ್ತು. ಆದರೆ ಸುಂದರಲಾಲ್ ಆ ಕೂಲಿಗಳೊಂದಿಗೆ ಕೂಲಿಯಾಗಿ ಕೆಲಸ ಮಾಡುತ್ತಿದ್ದರು. ಯಾರಾದರೂ ಕೆಲಸ ಕೇಳಿಕೊಂಡು ಬಂದರೆ ಅವರನ್ನು ಕಟ್ಟಡ ನಿರ್ಮಾಣದಲ್ಲಿ ತೊಡಗಿಸುತ್ತಿದ್ದರು. ಕಾಲಕ್ರಮೇಣ ಸಮಾಜದ ಉನ್ನತ

ವರ್ಗದ ಜನರೂ ಕೂಡ ಶ್ರಮದಾನ ಮಾಡಿದರು. ಸುಂದರಲಾಲ್ ಇಡೀ ದಿವಸ ಕೂಲಿಗಳೊಂದಿಗೆ ಕೆಲಸ ಮಾಡಿ ಸಂಜೆ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರದ ರಜೆಗಳಂದು ಅವರು ಜನರ ಬಳಿ ಹೋಗಿ ಕೂಲಿಯಾಳುಗಳಿಗೆ ಕೂಲಿ ಕೊಡುವುದಕ್ಕಾಗಿ ಹಣ ಸಂಗ್ರಹಿಸುತ್ತಿದ್ದರು. ಗಾಂಧೀಜಿಯವರ ಶರೀರಶ್ರಮ ತತ್ವದ ಆಧಾರದ ಮೇಲೆ ಹಾಸ್ಟೆಲನ್ನು ಕಟ್ಟಲಾಯಿತು. ಜಾತಿ ಸಮಸ್ಯೆಯ ಪರಿಹಾರಕ್ಕೆ ಶೈಕ್ಷಣಿಕ ಹಿನ್ನೆಲೆಯಲ್ಲಿ ಇದೊಂದು ಉತ್ತಮ ಮಾರ್ಗವೆಂದು ಸುಂದರಲಾಲ್ ಕಂಡುಕೊಂಡರು. ೧೯೫೦ರಲ್ಲಿ ಕಟ್ಟಡದ ನಿರ್ಮಾಣ ಪೂರ್ಣಗೊಂಡಿತ್ತು. ವಿದ್ಯಾರ್ಥಿಗಳ ಉಪಯೋಗಕ್ಕೆಂದು ತೆರೆಯಲ್ಪಟ್ಟಿತು. ಆಗ ಸುಂದರಲಾಲ ಬಹುಗುಣರಿಗೆ ವಯಸ್ಸು ೨೩. ಆ ಹಾಸ್ಟೆಲಿಗೆ ಅವರು ಠಕ್ಕರ್ ಬಾಪಾ ವಿದ್ಯಾರ್ಥಿ ನಿಲಯ ಎಂದು ನಾಮಕರಣ ಮಾಡಿದರು. ಠಕ್ಕರ್ ಬಾಪಾ ಮಹಾತ್ಮಾ ಗಾಂಧೀಜಿಯವರ ಸಹವರ್ತಿಯಾಗಿದ್ದರು. ಅವರು ಹರಿಜನರ ಮತ್ತು ಎಲ್ಲ ದಲಿತರ ಉದ್ಧಾರಕ್ಕಾಗಿ ಅವಿರತ ಹೋರಾಟ ಮಾಡುತ್ತಿದ್ದರು.

ಕಾಲಕ್ರಮೇಣ ಠಕ್ಕರ್ ಬಾಪಾ ಹಾಸ್ಟೆಲ್ ಸುಂದರಲಾಲರ ಕಾರ್ಯಕೇಂದ್ರವಾಯಿತು. ಅಲ್ಲಿದ್ದುಕೊಂಡೇ ಎಲ್ಲ ಜನರ ಉನ್ನತಿಗಾಗಿ ಮತ್ತು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಿಗಾಗಿ ಕೆಲಸ ಮಾಡಲು ಆರಂಭಿಸಿದರು.

ರಜೆಯ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅವರು ಜನತಾಶಿಕ್ಷಣದಲ್ಲಿ ಗ್ರಾಮೀಣ ಜನರು ತೊಡಗುವಂತೆ ಮಾಡುತ್ತಿದ್ದರು. ಗಾಂಧೀಜಿಯವರ ಪ್ರಭಾವವಿದ್ದರೂ ಕೂಡ ಜಾತಿ ತಾರತಮ್ಯತೆ ಮತ್ತು ಅಸ್ಪೃಶ್ಯತೆ ಗ್ರಾಮ ಜೀವನದಿಂದ ಮತ್ತು ದೇವ ಮಂದಿರಗಳ ರೀತಿನೀತಿಗಳಿಂದ ಮರೆಯಾಗಿರಲಿಲ್ಲ. ಉತ್ತರಾಖಂಡದಲ್ಲಿ ಭಾರತದ ಎರಡು ಅತಿ ಮಹತ್ವದ ನದಿಗಳ ಉಗಮ ಸ್ಥಾನವಿದೆ. ಗಂಗೋತ್ರಿ, ಯಮುನೋತ್ರಿ ದೇವಸ್ಥಾನಗಳು ರಾಷ್ಟ್ರೀಯ ಮಹತ್ವದ ತೀರ್ಥ ಕ್ಷೇತ್ರಗಳು. ಈ ಸ್ಥಳಗಳಿಂದ ಭಾರತದ ಪವಿತ್ರ ನದಿಗಳು ಹುಟ್ಟುತ್ತವೆ. ಗಂಗೋತ್ರಿ, ಯಮುನೋತ್ರಿ, ಬದರೀನಾಥ್ ಮತ್ತು ಕೇದಾರನಾಥ ಕ್ಷೇತ್ರಗಳು ವಿಶೇಷ ಪವಿತ್ರ ಸ್ಥಾನಗಳೆಂದು ಭಾವಿಸಲ್ಪಟ್ಟಿವೆ. ಪರಂಪರಾನುಗತವಾಗಿ ಹರಿಜನರಿಗೆ ಈ ಸ್ಥಳಗಳಲ್ಲಿ ಪ್ರವೇಶವಿರಲಿಲ್ಲ. ಜಾತಿಭೇದದ ಸಮಸ್ಯೆಯ ವಿರುದ್ಧ ತಮ್ಮ ಭಾವನೆಯನ್ನು ವ್ಯಕ್ತಪಡಿಸುವುದಕ್ಕಾಗಿ ಬಹುಗುಣರು ಠಕ್ಕರ್ ಬಾಪಾ ವಿದ್ಯಾರ್ಥಿ ನಿಲಯದ ಹುಡುಗರನ್ನು ಯಮುನೋತ್ರಿ ಮತ್ತು ಗಂಗೋತ್ರಿ ದೇವಸ್ಥಾನಗಳಿಗೆ ಕರೆದುಕೊಂಡು ಹೋಗಲು ನಿಶ್ಚಯಿಸಿದರು. ಈ ವಿದ್ಯಾರ್ಥಿಗಳಲ್ಲಿ ಹರಿಜನ ವಿದ್ಯಾರ್ಥಿಗಳೂ ಇದ್ದರು. ಇಲ್ಲಿ ವಿದ್ಯಾರ್ಥಿಗಳ ಅನುಭವ ಸಕಾರಾತ್ಮಕವಾಗಿತ್ತು. ದೇವಸ್ಥಾನಗಳಲ್ಲಿ ಪ್ರವೇಶಕ್ಕೆ ಯಾವುದೇ ವಿರೋಧ ಬರಲಿಲ್ಲ. ಆನಂತರ ಸುಂದರಲಾಲ್ ಒಬ್ಬ ಕಾರ್ಮಿಕ ವರ್ಗದ ವಿದ್ಯಾರ್ಥಿಯನ್ನು ಬುಧಕೇದಾರ ದೇಗುಲಕ್ಕೆ ಕರೆದುಕೊಂಡು ಹೋದರು. ಇದು ತೆಹರಿ ಬಳಿ ಇದೆ. ಇಲ್ಲಿಯ ಮೇಲ್ಜಾತಿಯ ಜನರು, ಅರ್ಚಕರು,

ಮತ್ತಿತರ ಭಕ್ತಾದಿಗಳು ಕೋಪಗೊಂಡರು. ಪದ್ಧತಿಯಂತೆ ಸುಂದರಲಾಲ್ ಮತ್ತು ಅವರ ತಂಡದವರು ತಮ್ಮ ಪಾದರಕ್ಷೆಗಳನ್ನು ಹೊರಗಿರಿಸಿ ದೇಗುಲದೊಳಕ್ಕೆ ಬಂದಿದ್ದರು. ಅಲ್ಲಿ ಸೇರಿದ್ದ ಜನಸ್ತೋಮ ಸುಂದರಲಾಲ್ ಮತ್ತು ಅವರ ತಂಡವನ್ನು ತಡೆಯಲು ಬಯಸಿತು. ಜನಸಮೂಹ ಹೊರಗಡೆಯಿತ್ತು. ಸುಂದರಲಾಲ್ ಮತ್ತು ಅವರ ಸಂಗಡಿಗರು ಒಳಗಡೆಯಿದ್ದರು. ಜನಸ್ತೋಮ ತಮ್ಮೆಡೆ ಬರುತ್ತಿರುವುದನ್ನು ಗಮನಿಸಿದ ಸುಂದರಲಾಲರು ದೇವಸ್ಥಾನದ ಬಾಗಿಲನ್ನು ಮುಚ್ಚುವುದರ ಮೂಲಕ ತಮ್ಮ ಮೇಲೆ ಸಂಭವಿಸಬಹುದಾಗಿದ್ದ ದಾಳಿಯನ್ನು ತಪ್ಪಿಸಲು ಪ್ರಯತ್ನಿಸಿದರು. ಹೊರಭಾಗದಲ್ಲಿ ಜನ ಕೂಗುವುದನ್ನೂ, ಅಣಕಿಸುವುದನ್ನೂ ಮತ್ತು ಹಲ್ಲೆ ನಡೆಸುವ ಬೆದರಿಕೆಯನ್ನು ಹಾಕುವುದನ್ನೂ ಮಾಡುತ್ತಿದ್ದರು. ಕಡೆಗೂ ಹೊರಗಿದ್ದ ಜನರು ಒಳನುಗ್ಗಿ ಸುಂದರಲಾಲ್ ಮತ್ತು ಅವರ ಜೊತೆಗಾರರನ್ನು ಪಾದರಕ್ಷೆಗಳಿಂದ ಹೊಡೆಯಲೂ ಪ್ರಾರಂಭಿಸಿದರು. ಕೊನೆಯಲ್ಲಿ ಈ ವಿಷಯವನ್ನು ನ್ಯಾಯಾಲಯಕ್ಕೆ ಕೊಂಡುಹೋಗುವ ಒಪ್ಪಂದಕ್ಕೆ ಬರಲಾಯಿತು. ನ್ಯಾಯಾಲಯದಲ್ಲಿ ತಮ್ಮ ವಾದಕ್ಕೆ ಯಾವುದೇ ಮನ್ನಣೆ ಸಿಗುವುದಿಲ್ಲವೆಂದು ವಿರೋಧಿಗಳು ತಿಳಿದುಕೊಂಡರು. ಹೀಗೆ ಆ ಜಗಳ ಕೊನೆಗೊಂಡಿತು. ಈ ಘಟನೆ ನಾಗರಿಕ ಸಮಾಜದ ಅಂತರ್ಗತವಾಗಿರುವ ದ್ವೇಷದ ತೀವ್ರತೆಯನ್ನು ತೋರಿಸಿತು. ತಾಮಸೀ ಕೋಪ ಬಹಿರಂಗಗೊಂಡಿತ್ತು. ಸಾಮಾಜಿಕ ಮನೋಭಾವನೆಯಲ್ಲಿ ಬದಲಾವಣೆ ತರುವುದು ಕಷ್ಟವೆಂದು ಸುಂದರಲಾಲ್ ಭಾವಿಸಿದರು. ಏಕೆಂದರೆ ತಲೆಮಾರುಗಳಿಂದ ಆಚರಣೆಯಲ್ಲಿರುವ ಪದ್ಧತಿಗಳ ಬೆಂಬಲ ಸಮಾಜಕ್ಕಿರುತ್ತದೆ. ಗಾಂಧೀಜಿಯವರ ಗ್ರಾಮಾಭಿವೃದ್ಧಿಯ ಬಗೆಗಿನ ವ್ರತಕ್ಕೆ ಹಾಗೂ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ ಸುಂದರಲಾಲ್ ಬದ್ಧರಾಗಿದ್ದರು. ಆದ್ದರಿಂದ ಗಾಂಧೀಜಿಯವರಂತೆಯೇ ಸುಂದರಲಾಲ್ ಕೂಡ ಸಾಮಾಜಿಕ ಸುಧಾರಣೆಗೆ ಬದ್ಧರಾಗಿಯೇ ಉಳಿದರು. ಅಂದರೆ ಸಮಾಜದಲ್ಲಿಯ ಅತ್ಯಂತ ಬಡವನೂ ಕೂಡ ವಿಶೇಷ ಸೌಕರ್ಯವುಳ್ಳ ವ್ಯಕ್ತಿಗೆ ಸಮನಾಗಿರಬೇಕು ಎಂಬುದೇ ಆ ಬದ್ಧತೆಯಾಗಿತ್ತು.

(ಮುಂದುವರಿಯುವುದು...)

* * *

ವೇದದಲ್ಲಿಯ ಮುತ್ತುಗಳು

– *ವಿನೋಬಾ*

ಮಿತ್ರೊ ಜನಾನ್ ಯಾತಯತಿ ಬ್ರುವಾಣಃ
ಮಿತ್ರೊ ದಾಧಾರ ಪ್ರಥಿವೀಮುತದ್ಯಾಮ್

ಸೂರ್ಯನೆಂಬ ಮಿತ್ರ ಜನರನ್ನು ಕರೆಯುತ್ತಾನೆ. ಅವರನ್ನು ಸೇವೆಯಲ್ಲಿ ತೊಡಗಿಸುತ್ತಾನೆ. ಅವನು ಸ್ವರ್ಗ ಮತ್ತು ಪೃಥ್ವಿ ಎರಡನ್ನು ಧರಿಸುತ್ತಾನೆ. ಋಷಿ ಸೂರ್ಯನಿಗೆ ಮಿತ್ರನೆಂಬ ಹೆಸರನ್ನು ಕೊಟ್ಟಿದ್ದಾನೆ.

* * *

ಅಭ್ರಾತರೊ ನ ಯೋಷಣೊ ವ್ಯಂತಃ ಪತಿರಿಪೊ ಜನಯೊ ದುರೇವಾಃ
ಪಾಪಾಸಃ ಸಂತೊ ಅನೃತಾ ಅಸತ್ಯಾಃ ಇದಂ ಪದಮ ಜನತಾ ಗಂಭೀರಂ

ಸಹೋದರರಿಲ್ಲದ ಅಕ್ಕ–ತಂಗಿಯರು ಮತ್ತು ಪತಿ ವಿಹೀನರಾದ ಪತ್ನಿಯರು ಯಾವ ಸಮಾಜದಲ್ಲಿ ಬಹುಸಂಖ್ಯೆಯಲ್ಲಿ ಇರುತ್ತಾರೊ ಹಾಗೂ ಎಲ್ಲಿ ಪಾಪಿಗಳು ಪಾಪಾಚರಣೆಯನ್ನು ಮಾಡಿ ಅದನ್ನು ಬಚ್ಚಿಡಲು ಬಯಸುತ್ತಾರೊ ಅಂಥ ಸಮಾಜಕ್ಕಾಗಿ ನರಕ ನಿರ್ಮಿತವಾಗಿದೆ.

* * *

ಬಹೂನಿ ಮೆ ಅಕೃತಾ ಕರ್ತ್ವಾನಿ

ವಿಶ್ವರೂಪವಾದ ಮಹಾನ್ ಆತ್ಮಕ್ಕೆ ಜಗತ್ತಿನಲ್ಲಿ ಸಜ್ಜನರ ಮೂಲಕ ಆಗುವ ಸತ್ಕರ್ಮ ಮತ್ತು ದುಷ್ಟರ ಮೂಲಕ ಆಗುವ ಅಸತ್ಕರ್ಮ ತನ್ನದೇ ಆಗಿವೆ ಎಂದು ಅನಿಸುವುದು ಸ್ವಾಭಾವಿಕ. ಈ ಭಾವದಿಂದ ನಾನು ಬಹಳಷ್ಟು ಅಕರಣೀಯ ಕರ್ಮ ಮಾಡಿದ್ದೇನೆ. ಹೀಗೆ ಋಷಿಯ ಉದ್ಗಾರ ಹೊರಡುತ್ತದೆ.

* * *

ಋತಸ್ಯ ಶ್ಲೋಕೊ ಬಧಿರಾ ತರ್ತದ

ಸತ್ಯದ ಶ್ಲೋಕ ಕಿವುಡ ಮನುಷ್ಯನ ಕಿವಿಯಲ್ಲಿಯೂ ಕೂಡ ಪ್ರವೇಶ ಮಾಡುತ್ತದೆ. ಯಾವ ಶಬ್ದ ಎಲ್ಲರನ್ನೂ ಬಹಳ ಸಹಜ ರೂಪದಲ್ಲಿ ಆಕರ್ಷಿಸಲು ಸಾಧ್ಯವೊ ಅದರಲ್ಲಿಯೇ ಅತ್ಯಂತ ಹೆಚ್ಚು ಕಲೆ ಪ್ರಕಟಗೊಳ್ಳುತ್ತದೆ.

* * *

ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ ತ್ರೀನ್ ಕೃಣಾವಾಮೇತ್ಯಾಹ
ಕನಿಷ್ಠ ಆಹ ಚತುರಸ್ ಕರೇತಿ

ಹಿರಿಯ ಕೆಲಸದವ ಹೀಗೆ ಹೇಳಿದ, 'ಈ ಲೋಟವನ್ನು ನಾವು ಎರಡು ಲೋಟವನ್ನಾಗಿ, ಮಾಡೋಣ. ಮಧ್ಯದವನು ಹೀಗೆ ಹೇಳಿದ "ಮೂರು

ಮಾಡೋಣ; 'ಕಿರಿಯವನೆಂದ ನಾಲ್ಕು ಮಾಡುವುದೇ ಒಳ್ಳೆಯದು.' ಒಂದು ವೇಳೆ ಕೆಲಸಗಾರ ಒಂದನ್ನು ಎರಡಾಗಿ ಎರಡನ್ನು ಮೂರಾಗಿ ಅಥವಾ ನಾಲ್ಕನ್ನಾಗಿ ಮಾಡ ಬಹುದಾಗಿದೆ, ಆದರೆ ಮೂಲವಸ್ತು ಒಂದೇ ಎಂಬುದನ್ನು ಮರೆಯುವಂತಿಲ್ಲ.

* * *

ಸಮುದ್ರಾ ದೂರ್ಮಿರ್ ಮಧು ಮಾ ಉದಾರತ್

ಈ ಹೃದಯವೆಂದರೆ ಸಮುದ್ರವೇ. ಸಮುದ್ರದ ಅಲೆಗಳಿಗೆ ಸಮಾನ ಅಸಂಖ್ಯ ಭಾವನೆಗಳು ಅದರಲ್ಲಿ ಏಳುತ್ತಿರುತ್ತವೆ. ಸಮುದ್ರದ ದೃಶ್ಯ ಈ ಹೃದಯದಲ್ಲಿ ಪ್ರಕಟವಾಗುತ್ತದೆ. ಹೃದಯದಲ್ಲಿ ಹಾಲು, ಜೇನು ಮತ್ತು ತುಪ್ಪದ ಅಲೆಗಳು ಹೊಯ್ದಾಡುತ್ತಿವೆ.

ಸಮುದ್ರಮ್ ಅಂದರೆ ಸಮ್+ಉದ್+ರಮ್. 'ಸಮ್' ಅಂದರೆ ನಾಲ್ಕು ಕಡೆಗೆ ಸಮಾನವಾಗಿ ಹರಡಿದ, 'ಉದ್' ಅಂದರೆ ಎತ್ತರಕ್ಕೇರಿದ, 'ರಮ್' ಅಂದರೆ ಆಹ್ಲಾದದಾಯಕ, ಆಡುತ್ತಿರುವ, ನೆಗೆಯುತ್ತಿರುವ ಅವು ಆನಂದ ಕೊಡುತ್ತಿವೆ.

* * *

ರೈತ ಎತ್ತಿನ ಸೇವೆ ಮಾಡುತ್ತಾನೆ. ಆ ಎತ್ತು ತುಚ್ಛವಲ್ಲ. ವೇದಗಳಲ್ಲಿ ವಾಮ ದೇವನು ಶಕ್ತಿರೂಪಿಯಾಗಿ ವಿಶ್ವದಲ್ಲಿ ವ್ಯಾಪವಾಗಿರುವ ಎತ್ತಿನ ವರ್ಣನೆ ಮಾಡಿದ್ದಾನೆ. ಅದೇ ಶಕ್ತಿ ಆ ರೈತನ ಎತ್ತಿನಲ್ಲಿ ಕೂಡ ಇದೆ.

***

* * *

ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾಃ ದ್ವೆ ಶೀರ್ಷೆ ಸಪ್ತ ಹಸ್ತಾಸೊ ಅಸ್ಯ ತ್ರಿಧಾ ಬದ್ಧೋ ವೃಷಭೋ ರೋರ ವೀತಿ ಮಹೋ ದೇವೊ ಮರ್ತ್ಯಾ ಆವಿವೇಶ

ಯಾವುದಕ್ಕೆ ನಾಲ್ಕು ಕೊಂಬುಗಳು ಇವೆಯೋ, ಮೂರು ಕಾಲುಗಳು ಇವೆಯೋ, ಎರಡು ತಲೆಗಳಿವೆಯೋ, ಏಳು ಕೈಗಳಿವೆಯೋ, ಯಾವುದು ಮೂರು ಸ್ಥಳದಲ್ಲಿ ಕಟ್ಟಲ್ಪಟ್ಟಿದೆಯೋ, ಯಾವುದು ಮಹಾನ್ ತೇಜಸ್ವಿಯಾಗಿ ಎಲ್ಲ ಮರ್ತ್ಯಾ ವಸ್ತುಗಳಲ್ಲಿ ವ್ಯಾಪ್ತವಾಗಿದೆಯೋ ಆ ಗರ್ಜಿಸುವ ವಿಶ್ವವ್ಯಾಪ್ತಿ ಎತ್ತಿನ ಪೂಜೆಯನ್ನು ರೈತ ಮಾಡುತ್ತಾನೆ.

ಟೀಕಾಕಾರರು ಈ ಒಂದು ರುಚಾದ ಭಿನ್ನ ಭಿನ್ನ ಅರ್ಥಮಾಡಿದ್ದಾರೆ. ಕೆಲವರಿಗೆ ಅದು ಓಂಕಾರದ ಪ್ರತೀಕವಾಗಿ ತೋರುತ್ತದೆ. ಓಂಕಾರದ ಮೂರು ಮಾತ್ರೆಗಳಿಂದ ಮೂರು ಸ್ಥಳದಲ್ಲಿ ಕಟ್ಟಿ ಹಾಕಲ್ಪಟ್ಟ ಆ ವೃಷಭ ಪ್ರತಿಯೊಬ್ಬರ ಹೃದಯ ಮಂದಿರದಲ್ಲಿ, ಜೀವನದ ಅತ್ಯಂತ ಅಂತಃಸ್ಥಳದಲ್ಲಿ ಗರ್ಜನೆ ಮಾಡುತ್ತದೆ.

ವಾಮದೇವನ ಈ ಉಕ್ತಿ ಅನುಸಾರ ಶಂಕರನ ವಾಹನವೆಂದು ತಿಳಿಯಲಾಗಿರುವ ನಂದಿ ಓಂಕಾರದ ಪ್ರತೀಕವೆಂದು ತಿಳಿಯಲಾಗುತ್ತದೆ.

* * *

ಅಂತಃ ಸಮುದ್ರೇ ಹೃದ್ಯಂತ ರಾಯುಷಿ

ಆ ಸಮುದ್ರವನ್ನು ನೋಡಿರಿ, ಅದು ನನ್ನ ಹೃದಯ ಸಮುದ್ರದಲ್ಲಿ

ಮಿಲನಗೊಂಡಿದೆ. ಅದರಲ್ಲಿ ಮತ್ತು ನನ್ನಲ್ಲಿ ಸಾಮ್ಯವಿದೆ. ಯಾವ ರೀತಿ ಸಮುದ್ರದಲ್ಲಿ ಅಲೆಗಳು ಎದ್ದೇಳುತ್ತವೋ, ಅದೇ ರೀತಿ ನನ್ನ ಅಂತಃ ಸಮುದ್ರದಲ್ಲಿ ಅಲೆಗಳು ಎದ್ದೇಳುತ್ತವೆ.

ಒಟ್ಟಿನಲ್ಲಿ ಆ ಸಮುದ್ರದಲ್ಲಿ ಏನಿದೆ? ಆ ಉಪ್ಪು ನೀರಿನ ಅಲೆಗಳು ನೆಗೆಯುತ್ತಿರುವುದನ್ನು ನೋಡಿದಾಗ ನನ್ನ ಹೃದಯ ಕುಣಿಯಲಾರಂಭಿಸುತ್ತದೆ. ಜ್ಞಾನ ಮತ್ತು ಪ್ರೇಮದ ವಿಶಾಲ ಸಾಗರದ ಹೃದಯದಲ್ಲಿ ಅಲೆಗಳು ಕುಣಿಯಲಾರಂಭಿಸಿದರೆ ನಾನು ಯಾವ ರೀತಿ ಕುಣಿಯಲೆದ್ದೇಳುವೆನು? ವೈದಿಕ ಋಷಿಯ ಹೃದಯದಲ್ಲಿ ಹೀಗೆಯೆ ಸಮುದ್ರ ಎದ್ದೇಳುತ್ತಿತ್ತು. ನನಗೆ ಅದರ ಆತ್ಮರೂಪವಾಗಿ ದರ್ಶನವಾಗುತ್ತದೆ. ಆದ್ದರಿಂದ ಯಾವುದನ್ನು ನೋಡಿದರೆ ಆನಂದ ಉಂಟಾಗುತ್ತದೊ ಅದು ನನ್ನದೇ ರೂಪವಾಗಿದೆ.

* * *

ದಮೇ ದಮೇ ಸಪ್ತ ರತ್ನಾ

ದಮ ಅಂದರೆ ಮನೆ. ನನ್ನ 'ದಮ'ದ ಅರ್ಥ ಇಂದ್ರಿಯಗಳ ದಮನ, ಸಂಯಮ. ಋಷಿ ಹೇಳುತ್ತಾರೆ- ದಮ ದಮ ಸಪ್ತ ರತ್ನ ಅಂದರೆ ಪ್ರತಿಯೊಂದು ಮನೆಯಲ್ಲಿ ಏಳು ರತ್ನಗಳಿವೆ.

೧. ಹೊಟ್ಟೆತುಂಬ ಒಳ್ಳೆಯ ಊಟ ೨. ಒಳ್ಳೆಯ ಬಟ್ಟೆ ೩. ಒಳ್ಳೆಯ ಅಂಗಳದ ಮನೆ ೪. ಒಳ್ಳೆಯ ಶಿಕ್ಷಣ ೫. ಗಾಳಿ-ಆರೋಗ್ಯದ ಒಳ್ಳೆಯ ವ್ಯವಸ್ಥೆ ೬. ಒಳ್ಳೆಯ ಉಪಕರಣಗಳು ೭. ಮನೋರಂಜನೆಯ ಸಾಧನಗಳು.

ಈ ಏಳು ರತ್ನಗಳು ಮನೆಮನೆಗೆ ಹಂಚಲ್ಪಟ್ಟಾಗ ಗ್ರಾಮಸ್ವರಾಜ್ಯದ ಸ್ಥಾಪನೆಯಾಗುತ್ತದೆ.

* * *

ಜನಪದ ವ್ಯಕ್ತಿ

ಸಾಹಸಿ ಕೃಷಿಕ ಮಹಿಳೆ ಶೇಕಮ್ಮ

ಕೊಪ್ಪಳ ಜಿಲ್ಲೆಯಲ್ಲಿ 'ಕಲ್ಲು ತಾವರಗೇರಾ' ಎಂಬ ಹಳ್ಳಿ ಇದೆ. ಹೆಸರಿಗೆ ತಕ್ಕಂತೆ ಆ ಊರು ಹಾಗೂ ಊರಿನ ಬಹುತೇಕ ಜಮೀನುಗಳೆಲ್ಲ ಕಲ್ಲುಗಳಿಂದಲೇ ಕೂಡಿವೆ. ಇಲ್ಲಿ ಮನೆಗಳನ್ನು ಪಾಯಹಾಕಿ ಕಟ್ಟುವುದೇ ಇಲ್ಲ! ಹಾಸು ಬಂಡೆಯಮೇಲೆಯೇ ಕಲ್ಲುಗಳನ್ನು ಒಂದರಮೇಲೊಂದು ಪೇರಿಸಿ ಮನೆ ಕಟ್ಟುತ್ತಾರೆ. ಇನ್ನು ಜಮೀನುಗಳಲ್ಲಿ ಎಲ್ಲೆಂದರಲ್ಲಿ ಬಂಡೆಗಳು ಹಾಸಿರುವುದರಿಂದ ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡಲು ಸಾಧ್ಯವೇ ಇಲ್ಲ. ಇಂತಹ ಜಮೀನುಗಳಲ್ಲಿ ರೈತರು ಕಲ್ಲುಗಳನ್ನು ಸುತ್ತುಬಳಸಿ ಅಲ್ಲಲ್ಲಿರುವ ಮಣ್ಣಿನಲ್ಲಿಯೇ ಕೃಷಿ ಮಾಡಿಕೊಂಡಿದ್ದಾರೆ. ಅಲ್ಲಿಯವರು ಹೆಸರಿಗೆ ಹತ್ತಾರು ಎಕರೆ ಭೂಮಿಗೆ ಒಡೆಯರಾಗಿದ್ದರೂ ಅದರಲ್ಲಿ ಒಂದೆರಡು ಎಕರೆ ಮಾತ್ರ ಕೇಷಿಗೆ ಯೋಗ್ಯವಾದ ಮಣ್ಣಿನ ಜಮೀನಿದ್ದರೆ ಉಳಿದಂತೆಲ್ಲವೂ ಕಲ್ಲುಮಯ!

ಬಾಗಲಕೋಟೆ ಜಿಲ್ಲೆ ಕೂಡಲಸಂಗಮದ ಪಕ್ಕದಲ್ಲಿನ ಒಂದು ಹಳ್ಳಿಯವರಾಗಿದ್ದ ಶೇಕಮ್ಮಳ ಮೂಲ ಕುಟುಂಬದವರು ಬಸವ ಸಾಗರ ಅಣೆಕಟ್ಟು ನಿರ್ಮಾಣವಾದ ನಂತರ ನೀರಿನಲ್ಲಿ ಆ ಹಳ್ಳಿ ಮುಳುಗಿಹೋದಾಗ ಸಕಾರದಿಂದ ಪರಿಹಾರ ಧನ ಪಡೆದುಕೊಂಡು ತಮ್ಮ ಸಂಬಂಧಿಕರು ನೆಲೆಸಿದ್ದ ಕೊಪ್ಪಳ ಜಿಲ್ಲೆಯ ಕಲ್ಲು ತಾವರಗೇರಾಕ್ಕೆ ಬಂದರು. ೩೦ ವರ್ಷಗಳ ಹಿಂದೆ ಇದೇ ಊರಿನ ಹುಚ್ಚಪ್ಪನವರೊಂದಿಗೆ ಅಂದು ೧೫ ವರ್ಷದವಳಾಗಿದ್ದ ಶೇಕಮ್ಮಳನ್ನು ಲಗ್ನ ಮಾಡಿಕೊಡಲಾಗಿತ್ತು.

ಹುಚ್ಚಪ್ಪನವರ ಕುಟುಂಬಕ್ಕೆ ಹೆಸರಿಗೆ ಇದ್ದದ್ದು ೧೬ ಎಕರೆ ಜಮೀನು ಮಾತ್ರ. ಅದರಲ್ಲಿ ಬಹುತೇಕ ಕಲ್ಲಿನ ಹಾಸು ಬಂಡೆಗಳದೇ ಸಾಮ್ರಾಜ್ಯ. ಬಹು ವರ್ಷಗಳ ಕಾಲ ಇಂತಹ ಜಮೀನಿನಲ್ಲಿಯೇ ಬದುಕು ನಡೆಸಿದ ಶೇಕಮ್ಮಳಿಗೆ ಈ ಕಲ್ಲು ಬಂಡೆಗಳ ಮೇಲೇಕೆ ವ್ಯವಸಾಯ ಮಾಡಬಾರದು ಎಂಬ ವಿಚಾರ ಹೊಳೆಯಿತು. ಇದನ್ನು ಕೇಳಿದ ಕುಟುಂಬದ ಸದಸ್ಯರೆಲ್ಲ ನಕ್ಕರು. ಆದರೆ ನಂತರ ಶೇಕಮ್ಮಳ ವಿಚಾರಕ್ಕೆ ಸಹಕರಿಸಲು ಸದಸ್ಯರೆಲ್ಲ ಒಪ್ಪಿಕೊಂಡರು.

ಶೇಕಮ್ಮಳ ಯೋಜನೆಯಂತೆ ಇಡೀ ಕುಟುಂಬವೇ ಸಜ್ಜಾಯಿತು! ಎತ್ತು ಬಂಡಿಗಳನ್ನು ಹೂಡಿ ಹಾಳು ಕೆರೆಯ ಮಣ್ಣನ್ನು ತಂದು ಹಾಸು ಬಂಡೆಯ ಮೇಲೆ ಎರಡು ಅಡಿಗಳಷ್ಟು ದಪ್ಪವಾಗಿ ಮಣ್ಣನ್ನು ಸುರಿಯಲಾರಂಭಿಸಿದರು. ಅರ್ಧ ಎಕರೆ ಜಮೀನಿನಲ್ಲಿ ಪ್ರಾಯೋಗಿಕವಾಗಿ ನಡೆದ ಈ ಕೆಲಸ ತಿಂಗಳಾನುಗಟ್ಟಲೆ ಮುಂದುವರೆಯಿತು. ಜಮೀನಿಗೆ ತಂದ ಮಣ್ಣನ್ನು ಸಮತಟ್ಟಾಗಿ ಹರಡಿದರು. ಇಳಿಜಾರು ಪ್ರದೇಶದಲ್ಲಿ ಕೊಂಚ ಹೆಚ್ಚು ಮಣ್ಣಿನಿಂದ ಸಮತೋಲನಗೊಳಿಸಿದರು.

ಹಾಸು ಬಂಡೆಯ ಮೇಲೆ ಕೇವಲ ಎರಡು ಅಡಿಗಳಷ್ಟು ದಪ್ಪವಾಗಿ ಹರಡಿರುವ ಮಣ್ಣಿನ ನೆಲದಲ್ಲಿ ಆಳವಾಗಿ ಬೇರು ಬಿಡುವ ಬೆಳೆಗಳನ್ನು ಬೆಳೆಯುವುದರ ಬದಲಿಗೆ ಮೇಲ್ಮಟ್ಟದಲ್ಲಿ ಬೇರು ಬಿಡುವ ಬೆಳೆಗಳನ್ನು ಬೆಳೆಯಬೇಕು ಹಾಗೂ ಕಡಿಮೆ ಆಳದವರೆಗೆ ಇರುವ ಈ ಮೇಲ್ಮಣ್ಣಿನಲ್ಲಿರುವ ಗಾಳಿಯಲ್ಲಿ ತೇವಾಂಶ ಕಡಿಮೆಯಾಗುವ ಸಾಧ್ಯತೆಯಿರುವುದರಿಂದ ಮೇಲಿಂದ ಮೇಲೆ ನೀರು ಹಾಯಿಸುವ ಪ್ರಮೇಯ ಬರಬಹುದು ಎಂಬ ವಿಚಾರದಿಂದಲೇ ತೆರೆದ ಬಾವಿಯಿಂದ ಕೊಂಚ ನೀರನ್ನು ಬಳಸಿಕೊಂಡು ಕನಕಾಂಬರ, ತರಕಾರಿ ಬೆಳೆ ಮಾಡಿದರು. ಭೂಮಿಯ ತೇವಾಂಶ ಬೇಗನೆ ಆರಿ ಹೋಗಿ ಬೆಳೆ ಒಣಗಬಹುದು ಎಂದುಕೊಂಡಿದ್ದ ಶೇಕಮ್ಮಳ ಚಿಂತನೆ ಸರಿಯಾಗಿತ್ತು. ವೇಗವಾಗಿ ಹಸಿ ಆರುತ್ತದೆ, ವೇಗವಾಗಿ ಹಸಿಯಾಗುತ್ತದೆ. ಒಂದು ಎಕರೆ ಸಾಮಾನ್ಯ ನೆಲಕ್ಕೆ ಬೇಕಾಗುವಷ್ಟು ನೀರು ಹಾಗೂ ಸಮಯ ನಾಲ್ಕು ಎಕರೆಯ ಈ ಕೃತಕ ಕೃಷಿ ಭೂಮಿಗೆ ಸಾಲುವಂತಿದ್ದರಿಂದ ಅಂತಹ ತೊಂದರೆ ಕಂಡುಬರಲಿಲ್ಲ.

ಹಾಸುಬಂಡೆಯ ಮೇಲೆ ಹಾಕಿದ ಬೆಳೆಗಳು ಹುಲುಸಾಗಿಯೇ ಉತ್ತಮ ಫಸಲು ತಂದುಕೊಟ್ಟವು! ಕೇವಲ ಕನಕಾಂಬರ ಹೂವಿನ ಬೆಳೆಯಿಂದ ೮,೦೦೦ ರೂಪಾಯಿ ಆದಾಯ ಪಡೆದುಕೊಂಡರು. ಕನಕಾಂಬರ ಸಾಲಿನ ಪಕ್ಕದಲ್ಲಿ ಹಾಕಿದ್ದ ಮೆಣಸಿನ ಗಿಡಗಳು, ಚವಳಿ(ಗೋರಿ ಕಾಯಿ), ಹೀರೆಕಾಯಿ, ಬದನೆ, ಅವರೆ, ಹತ್ತಿ...... ಹೀಗೆ ಅನೇಕ ಬೆಳೆಗಳು ಕೈ ತುಂಬ ಕಾಸು ಸಂಪಾದಿಸಿಕೊಟ್ಟವು.

ಹೀಗೆ ಬೆಳೆದ ಬೆಳೆಗಳು ಶೇಕಮ್ಮಳಿಗೆ ಕಲ್ಲಿನ ಹಾಸಿನ ಮೇಲೆ ಹಸಿರು ಮೂಡಿಸುವ ಗುಟ್ಟನ್ನು ಬಿಚ್ಚಿಕೊಟ್ಟವು. ಈ ಎಲ್ಲ ಪ್ರಯೋಗಗಳಿಂದ ಸಫಲರಾದ ಶೇಕಮ್ಮ ಮೂರು ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಬಂಡೆಯ ಮೇಲೆ ನೇಗಿಲನ್ನು ಬಳಸುವ ವಿಚಾರ ಮಾಡಿದರು. ಈ ಬಾರಿ ಕುಟುಂಬದ ಸದಸ್ಯರೆಲ್ಲ ವಿಶ್ವಾಸದಿಂದ ಸಹಕಾರ ನೀಡಲು ಮುಂದೆ ಬಂದರು. ಅದರಂತೆ ಹಾಸು ಬಂಡೆಯ ಮೇಲೆ ಮಣ್ಣು ಸುರಿಯುವ ಕೆಲಸ ಆರಂಭವಾಯಿತು.

ಈ ಬಾರಿ ನಾಲ್ಕಾರು ಟ್ರ್ಯಾಕ್ಟರ್‌ಗಳ ಮೂಲಕ ಕೆರೆಯ ಮಣ್ಣು ಜಮೀನಿಗೆ ವರ್ಗಾವಣೆಗೊಂಡಿತು. ನೂರಾರು ವರ್ಷಗಳಿಂದ ಹೂಳು ತುಂಬಿಕೊಂಡು ನೀರು ನಿಲ್ಲದಂತಾಗಿದ್ದ ಹಾಲಹಳ್ಳಿಕೆರೆ, ಹಿರೇಕೆರೆಯ ಮಣ್ಣು ಶೇಕಮ್ಮಳ ಹೊಲಕ್ಕೆ ಭರ್ತಿಯಾಗಲಾರಂಭಿಸಿತು. ಮಣ್ಣನ್ನು ಹರಡಿ ಉಳುಮೆಗೆ ಸಿದ್ಧಪಡಿಸಿಕೊಂಡರು.

ಹೊಲದಲ್ಲಿದ್ದ ಬಂಡೆಗಳ ಪೊಟರೆಗಳ ಸಂದುಗೊಂದುಗಳಲ್ಲಿ ಮಾವು, ನಿಂಬೆ, ಸಪೋಟ, ಪೇರಲ(ಸೀಬೆ)ಹಣ್ಣಿನ ಸಸಿಗಳನ್ನು ನೆಟ್ಟು ಅವುಗಳಿಗೆ ಕುಟುಂಬದ ಸದಸ್ಯರೊಂದಿಗೆ ಬಾವಿಯಲ್ಲಿನ ನೀರು ತಂದು ಹಾಕಿ ಬೆಳೆಸಿದರು. ಈಗ ಜಮೀನಿನಲ್ಲಿ ಬೆಳೆದು ನಿಂತಿರುವ ತೆಂಗು, ಮಾವು, ನಿಂಬೆ ಆದಾಯ ತರುತ್ತಿವೆ. ಸಾವಿರಾರು ವರ್ಷಗಳಿಂದ ಹಾಳುಬಿದ್ದಿದ್ದ ಕಲ್ಲಿನ ಹಾಸಿನ ಮೇಲೆ ಶೇಕಮ್ಮ ನಡೆಸಿದ ಪ್ರಯೋಗಗಳಿಂದ ಈ ಬಾರಿ ಮೆಕ್ಕೆ ಜೋಳ ೨೫,೦೦೦ ರೂಪಾಯಿ, ಕಡಲೆ

೨೦,೦೦೦, ತೆಂಗು ೧೦,೦೦೦ ರೂಪಾಯಿಯ ಆದಾಯದ ಜೊತೆಗೆ ನವಣೆ, ಶೇಂಗಾ, ಜೋಳದಂತಹ ಬೆಳೆಗಳನ್ನು ಬೆಳೆದಿದ್ದಾರೆ.

ಹಾಸುಬಂಡೆಯ ಮೇಲೆ ಹಸಿರುಹೊದಿಕೆ ಹಾಕಿರುವ ಶೇಕಮ್ಮ, "ನನ್ನ ಜಮೀನಿನ್ಯಾಗ ಇರೂದ ಸ್ವಲ್ಪ ಮಣ್ಣು. ಇಂತಾದ್ರೊಳಗ ಮಣ್ಣು ನೀರಿಗೆ ಕೊಚ್ಚಿಕೊಂಡು ಹೋಗಬಾರ್ದು, ಜೊತೆಗೆ ಇರೂ ಮಣ್ಣನ್ನ ಫಲವತ್ತಾಗಿರಿಸಿಕೋಬೇಕು ಅನ್ನೂ ವಿಚಾರದಿಂದ ನಾನೇ ಎರೆ ಗೊಬ್ಬರ ಮಾಡಿ ಈ ಜಮೀನಿನ ಮಣ್ಣು ಫಲವತ್ತಾಗೂ ಹಂಗ ಮಾಡ್ಕೊಂಡೀನ್ರೀ" ಎನ್ನುತ್ತಾರೆ. ರಸಗೊಬ್ಬರಕ್ಕೆಂದು ಕೈ ತುಂಬ ಕಾಸು ಹಿಡಿದುಕೊಂಡು ಪೇಟೆಯ ಗೊಬ್ಬರದಂಗಡಿಯ ಮುಂದೆ ಶೇಕಮ್ಮ ನಿಲ್ಲುವುದಿಲ್ಲ. ಅವರಿಗೆ ಆತ್ಮ ವಿಶ್ವಾಸವಿದೆ, ರಟ್ಟೆಯಲ್ಲಿ ತಾಕತ್ತಿದೆ.

ಬೆಳೆಯ ಕೊಯ್ಲಾದ ನಂತರ ಕೃಷಿ ತ್ಯಾಜ್ಯಗಳನ್ನು ಕಲ್ಲಿನ ಪೊಟರೆಗಳಲ್ಲಿ ಹಾಕಿ ದನಗಳ ಸಗಣಿಯನ್ನೂ ಸೇರಿಸಿ ಎರೆಗೊಬ್ಬರ ತಯಾರಿಸಿಕೊಳ್ಳುವ ಶೇಕಮ್ಮ ಮಣ್ಣಿಗೆ ಚಿನ್ನದ ಮೆರಗನ್ನು ನೀಡಿದ್ದಾರೆ. ಬೀಜ ತಯಾರಿಕೆ, ಗೊಬ್ಬರ ತಯಾರಿಕೆಯಂತಹ ತಂತ್ರಗಳನ್ನು ಅನುಸರಿಸಿ ಕೃಷಿ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿ ಬದುಕುತ್ತಿರುವ ಶೇಕಮ್ಮ ನಾಡಿನ ಕೃಷಿಕರಿಗೆ ಆದರ್ಶಪ್ರಾಯರಾಗಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ನೂರಾರು ಎಕರೆ ಕಲ್ಲು ಭೂಮಿಯಿದೆ. ರೈತರು ಮನಸ್ಸು ಮಾಡಿ ಶೇಕಮ್ಮಳಂತೆ ದುಡಿದರೆ ಭೂಮಿ ಕೃಷಿಯೋಗ್ಯವಾಗಬಹುದಾಗಿದೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯ ಶೇಕಮ್ಮಳನ್ನು "ಶ್ರೇಷ್ಠ ಕೃಷಿಕ ಮಹಿಳೆ" ಪ್ರಶಸ್ತಿ ನೀಡಿ ಗೌರವಿಸಿದೆ. ಸುತ್ತಮುತ್ತಣ ರೈತರು ತಂಡೋಪತಂಡವಾಗಿ ಹಾಸುಗಲ್ಲಿನ ಮೇಲಣ ಹಸಿರನ್ನು ನೋಡಲು ಮತ್ತು ಶೇಕಮ್ಮಳ ಮಾರ್ಗದರ್ಶನ ಪಡೆಯಲು ಸಾಗುತ್ತಿದ್ದಾರೆ (ಸಾಭಾರ: ಸಿರಿಸಮೃದ್ಧಿ)

* * *

ಸನ್ಮಾನ್ಯರಿಂದ...

ಅಣ್ಣಾ ಹಜಾರೆ ಪಾಂಚಜನ್ಯ ಊದಿದ್ದಾರೆ! ಈ ಲೇಖನ ಸಮಯೋಚಿತವಾಗಿದೆ. ಹಿರಿಯ ಸಾಹಿತಿಯಾದ ಡಾ॥ಹಾ.ಮಾ.ನಾಯಕರು ತಮ್ಮ 'ಸಂಗತಿ'ಯಲ್ಲಿ ಬರೆದಿರುವಂತೆ "ಭ್ರಷ್ಟ ತಾನೊಬ್ಬನೇ ಭ್ರಷ್ಟನಾಗುವುದಿಲ್ಲ. ಇಡೀ ಸಮಾಜವನ್ನೇ ಭ್ರಷ್ಟಗೊಳಿಸುತ್ತಾನೆ."

– *ಎಂ.ಜಿ. ಶಿವರಾಮ್*, ಬೆಂಗಳೂರು

ಪುಸ್ತಕ ಪರಿಚಯ

ಪುಸ್ತಕದ ಹೆಸರು : ಅಣ್ಣಾ ಹಜಾರೆ

ಲೇಖಕರು : ಪ್ರೊ. ಜಿ.ಬಿ.ಶಿವರಾಜು

ಪ್ರಕಾಶಕರು : ಮಹಾತ್ಮಾಗಾಂಧೀ ಗ್ರಾಮೀಣಾಭಿವೃದ್ಧಿ ಟ್ರಸ್ಟ್
ನಂ–೧೮೧, ೨ನೇ 'ಬಿ' ಮೇಯಿನ್,
೬ನೇ ಕ್ರಾಸ್, ೯ನೇ ಬ್ಲಾಕ್,
ನಾಗರಭಾವಿ ೩ನೇ ಹಂತ,
ಬೆಂಗಳೂರು–೭೨

ಪುಟಗಳು : ೪೫+೧=೪೬

ಬೆಲೆ : ೩೦ ರುಪಾಯಿ

ಸ್ವಾತಂತ್ರದ ಜೊತೆಯೇ ಭಾರತಕ್ಕೆ ಭ್ರಷ್ಟಾಚಾರವು ಬಂದಿತು. ೬೩ ವರ್ಷಗಳ ಅವಧಿಯಲ್ಲಿ ಸ್ವಾತಂತ್ರ್ಯ ಸ್ವರಾಜ್ಯವಾಗಿ ರೂಪಾಂತರಗೊಳ್ಳದಿದ್ದರೂ ಭ್ರಷ್ಟಾಚಾರ ಮಾತ್ರ ದೇಶದ ಜೀವನದ ಎಲ್ಲ ವಿಭಾಗಗಳಲ್ಲಿ ಹರಡಿಕೊಂಡಿತು. ರಾಷ್ಟ್ರಜೀವನದಲ್ಲಿ ಬೇರೂರಿದ ಭ್ರಷ್ಟಾಚಾರದ ವಿರುದ್ಧ ಸತತವಾಗಿ ಹೋರಾಟಮಾಡುತ್ತಿರುವ ವ್ಯಕ್ತಿ ಅಣ್ಣಾ ಹಜಾರೆ. ಪ್ರಧಾನಮಂತ್ರಿ, ನ್ಯಾಯಾಧೀಶರು ಮತ್ತು ಜನಪ್ರತಿನಿಧಿಗಳು ಸಹ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಗೆ ಒಳಪಡಬೇಕೆಂಬ ಉದ್ದೇಶಕ್ಕಾಗಿ ಲೋಕಪಾಲ್ ಮಸೂದೆಯ ಅಗತ್ಯವನ್ನು ಹಜಾರೆ ಕಂಡು ಹಿಡಿದರು. ಕೇಂದ್ರ ಸರ್ಕಾರ ಈ ಮಸೂದೆ ಬಗ್ಗೆ ಕಣ್ಣುಮುಚ್ಚಾಲೆ ಆಡಲು ಪ್ರಾರಂಭಿಸಿತು. ಆಗ ಸರ್ಕಾರವನ್ನು ತಹಬಂದಿಗೆ ತರುವುದಕ್ಕಾಗಿ ಅಣ್ಣಾ ಹಜಾರೆ ಆಮರಣ ಉಪವಾಸ ಪ್ರಾರಂಭಿಸಿದರು. ದೇಶದ ಜನ ಸಾಮೂಹಿಕವಾಗಿ ಅವರಿಗೆ ಬೆಂಬಲಿಸಿದರು. ಭ್ರಷ್ಟಾಚಾರದಿಂದ ರೋಸಿಹೋಗಿರುವ ಜನರ ಕಣ್ಮಣಿಯಾಗಿದ್ದಾರೆ ಅಣ್ಣಾ ಹಜಾರೆ. ಯುವಕರಿಗೆ ಆದರ್ಶವ್ಯಕ್ತಿಯಾಗಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ ನಾಯಕ ಅಣ್ಣಾ ಹಜಾರೆಯವರ ಜೀವನ, ಅವರ ಸಾಧನೆ ಇತ್ಯಾದಿಗಳನ್ನು ತಿಳಿಯುವ ಕುತೂಹಲ ಸಹಜವಾದದ್ದೆ. ಅಂಥ ಕುತೂಹಲವನ್ನು ತಣಿಸುವ ಕಿರುಹೊತ್ತಿಗೆ ಈ ಪುಸ್ತಕ. ಅಣ್ಣಾ ಹಜಾರೆಯವರ ಬಗ್ಗೆ ತಿಳಿಯಬೇಕೆಂದು ಬಯಸುವವರು ಈ ಪುಸ್ತಕವನ್ನು ಓದಬೇಕು.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನ ದಾರಿ ಕೇಂದ್ರದಲ್ಲಿ ಮೇ ೪ ರಿಂದ ೮ನೇ ತಾರೀಖಿನವರೆಗೆ ಮಕ್ಕಳಿಗಾಗಿ ಒಂದು ಬೇಸಿಗೆ ಶಿಬಿರ ನಡೆಯಿತು. ಇವರಲ್ಲಿ ಮಾಧ್ಯಮಿಕ ಎಂಟನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ.ವರೆಗಿನ ಸುಮಾರು ಮೂವತ್ತು ಮಕ್ಕಳಿದ್ದರು. ಇವರಲ್ಲಿ ಕೆಲವರು ಮೈಸೂರು, ಬೆಂಗಳೂರು, ಚೆನ್ನೈ ಮತ್ತು ಹೈದರಾಬಾದ್ ಇತ್ಯಾದಿ ಊರುಗಳಿಂದ ಬಂದವರಾಗಿದ್ದರು. ನಗರದಲ್ಲಿರುವ ಮಕ್ಕಳಿಗಾಗಿಯೇ ಎಂದು ಈ ಶಿಬಿರ ಏರ್ಪಡಿಸಲಾಗಿತ್ತು. ಈ ಐದು ದಿನದ ಶಿಬಿರದಲ್ಲಿ ಮಕ್ಕಳಿಗೆ ವಿವಿಧ ಬಗೆಯ ಅನುಭವ ದೊರೆಯುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಿರಗ್ನಿ ಆಹಾರ ತಯಾರಿಕೆ ಕಲಿಸಲಾಯಿತು. ಜೊತೆಗೆ ನಿರುಪಯೋಗಿ ಗಣಕಯಂತ್ರಗಳ ವಿಲೇವಾರಿ ಸಮಸ್ಯೆ ಪರಿಚಯ ಮಾಡಿಕೊಡಲಾಯಿತು. ನೀರಿನ ಮಹತ್ವ, ವ್ಯವಸಾಯ, ಪರಿಸರ ಮಾಲಿನ್ಯ ಇತ್ಯಾದಿಗಳ ಜೊತೆಗೆ ಚಿತ್ರಕಲೆ, ಕುಶಲಕಲೆ, ಆಟ, ಹಾಡುಗಳು, ವನಸಂಚಾರ ಇತ್ಯಾದಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಕೊನೆಯದಿನ ಮಕ್ಕಳ ಪೋಷಕರು ಭಾಗವಹಿಸಿದ್ದರು. ಮಕ್ಕಳು ವ್ಯಕ್ತಪಡಿಸಿದ ಅಭಿಪ್ರಾಯದ ಪ್ರಕಾರ ಇದೊಂದು ಉತ್ತಮ ಮತ್ತು ಪ್ರಯೋಜನಕಾರಿ ಶಿಬಿರವಾಗಿತ್ತು. ಈ ಶಿಬಿರದ ಸಂಯೋಜಕರಾಗಿ ಅಲೋಕ್, ಅನಂತ್‌ಸಿಂಗ್, ಸುಮನಸ್ ಕೌಲಗಿ ಇದ್ದರು.

ಪ್ರತಿವರ್ಷದಂತೆ ಮೇಲುಕೋಟೆ ಮತ್ತು ಸುತ್ತಮುತ್ತಲಿನ ಗ್ರಾಮದ ಮಕ್ಕಳಿಗಾಗಿ 'ದೊಡ್ಡ ಮರದಾ ನೆರಳಿನಲಿ' ಎಂಬ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಸುಮಾರು ೪೦ ಮಕ್ಕಳು ಭಾಗವಹಿಸಿದ್ದರು. ಕನ್ನಡ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪನವರು ಶಿಬಿರಕ್ಕೆ ಭೇಟಿಕೊಟ್ಟರು. ಶಿಬಿರದ ಮಕ್ಕಳೊಂದಿಗೆ ತಮ್ಮ ಬಾಲ್ಯದ ನೆನೆಪುಗಳನ್ನು ಹಂಚಿಕೊಂಡರು. ಕ್ರಿಕೆಟ್ ಆಟಕ್ಕಿಂತ ಭಾರತೀಯ ಗ್ರಾಮೀಣ ಆಟಗಳನ್ನು ಆಡಬೇಕೆಂದು ಮಕ್ಕಳಿಗೆ ತಿಳುವಳಿಕೆ ಕೊಟ್ಟರು.

ಬೆಂಗಳೂರಿನ ಒಂದು ಕೊಳಗೇರಿಯ ಸುಮಾರು ನಲವತ್ತು ಮಕ್ಕಳು ಹೊಸ ಜೀವನ ದಾರಿ ಕೇಂದ್ರದಲ್ಲಿ ಎರಡು ದಿನ ಶಿಬಿರ ನಡೆಸಿದರು. ಕೊಳಗೇರಿಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಯು ಮಕ್ಕಳನ್ನು ಕರೆದುಕೊಂಡು ಬಂದಿತ್ತು.

ನಬಾರ್ಡ್ ಸಂಸ್ಥೆಯ ಮಂಡ್ಯ ಜಿಲ್ಲಾಧಿಕಾರಿ ಶ್ರೀ ಬಿಂದು ಮಾಧವ ವಡವಿ ಟ್ರಸ್ಟ್‌ಗೆ ಭೇಟಿಕೊಟ್ಟರು.

೨೦೧೧ ಮೇ ಮಾಹೆಯ ದಾನಿಗಳು

ಶ್ರೀ ಕೆ.ಎನ್.ಸಿ.ಸ್ವಾಮಿ, ಶ್ರೀ ಬಿ.ಎಸ್.ಬಾಲಸುಬ್ರಮಣ್ಯಂ,
ಶ್ರೀಮತಿ ಗೌರಮ್ಮ ವಿದ್ಯಾಶಂಕರ್, ಶ್ರೀ ಕೆ.ಎಲ್.ಸುಬ್ಬರಾವ್ ಟ್ರಸ್ಟ್, ಶ್ರೀಎಂ.ಆರ್.ಭಾರ್ಗವ, ಶ್ರೀ ಆರ್.ಆರ್.ಆನವಟ್ಟಿ – ಬೆಂಗಳೂರು

ಶ್ರೀಮತಿ ಸುಶೀಲಾ ಸೋಸಲೇಗೌಡ, ಶ್ರೀ ನರೇಂದ್ರ ಸಿರಕಾಜ್,
ಶ್ರೀಕಂಠಯ್ಯ ಸ್ಮಾರಕ ಸಂಸ್ಥೆ, ಶ್ರೀ ಶ್ರೀಧರ್, ಶ್ರೀ ಜಗನ್ನಾಥ್, ಶ್ರೀ ವಿಭು – ಮೈಸೂರು

ಶ್ರೀಮತಿ ಸುನಂದಾ ದಿವಾನಜಿ – ಗುಲ್ಬರ್ಗಾ

ಶ್ರೀ ಮೋಹನ್, ಶ್ರೀಮತಿ ಶಾಂತಮ್ಮ – ಕೊಳ್ಳೇಗಾಲ

ಶ್ರೀ ಪರಶುರಾಮ ಸಿ.ಕುಂಬಾರ – ಮುಧೋಳ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೧

– *ಸುರೇಂದ್ರ ಕೌಲಗಿ*



ಜನಪದ ಸೇವಾ ಟ್ರಸ್ಟಿನ ೫೦ನೇ ವರ್ಷದ ಹಬ್ಬದ ಆಚರಣೆ ಹೇಗೆ ನಡೆಯಿತೆಂಬುದನ್ನು ಕಳೆದ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ತಿಳಿಸಬೇಕಾಗಿದ್ದ ವಿಷಯ ಉಳಿದು ಕೊಂಡಿತು. ಆ ಕೊರತೆಯನ್ನು ತುಂಬಲು ಈಗ ಇಲ್ಲಿ ಪ್ರಯತ್ನ ಮಾಡಲಾಗಿದೆ. ಸಮಾರಂಭದ ಬಗ್ಗೆ ಅಲ್ಲಿ ನೆರೆದಿದ್ದವರ ಮೇಲೆ ತುಂಬ ಪ್ರಭಾವ ಬೀರಿದ್ದು ಮತ್ತು ಸಮಾರಂಭ ಚೆನ್ನಾಗಿ ನಡೆಯಿತು ಅನಿಸುವುದಕ್ಕೆ ಕಾರಣವಾದದ್ದು ಸಮಾರಂಭಕ್ಕಾಗಿ ಏರ್ಪಡಿಸಿದ್ದ ವ್ಯವಸ್ಥೆಯಲ್ಲ. ನಿಜವಾದ ಕಾರಣ ಟ್ರಸ್ಟಿನ ಹಳೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಮುಖ್ಯವಾಗಿ ಕರುಣಾಗೃಹದ ವಿದ್ಯಾರ್ಥಿಗಳು ತಾವು ಟ್ರಸ್ಟಿನಿಂದ ಪಡೆದ ಸಹಾಯ ಮತ್ತು ಪ್ರೋತ್ಸಾಹದ ಬಗ್ಗೆ ತುಂಬ ಆತ್ಮೀಯವಾಗಿ ಹೇಳಿದ್ದು. ತಾವು ಟ್ರಸ್ಟಿಗೆ ಬರುವ ಮುನ್ನ ಇದ್ದ ಮನೋಸ್ಥಿತಿಗೂ, ನಂತರ ಟ್ರಸ್ಟಿನಿಂದ ಹೊರಗೆ ಹೋಗುವಾಗ ಇದ್ದ ಮನೋಸ್ಥಿತಿಯಲ್ಲಿಯ ವ್ಯತ್ಯಾಸವನ್ನು ಅವರೆಲ್ಲರೂ ಹೇಳಿದ್ದು ಕಾರಣ. ಅಂದಿನ ಸಭೆಯಲ್ಲಿ ಯಾರು ಯಾರು ಮಾತನಾಡಿದರೋ ಅವರ ಮಾತುಗಳೆಲ್ಲ ಉತ್ಪ್ರೇಕ್ಷತೆಯಿಲ್ಲದ್ದಾಗಿದ್ದವು. ನೈಜ ಸಂಗತಿಗಳನ್ನು ಬಿಂಬಿಸುವಂತಾಗಿದ್ದವು. ಉದಾಹರಣೆಗೆ ಕರುಣಾಗೃಹದ ಹಳೆಯ ವಿದ್ಯಾರ್ಥಿಯಾಗಿದ್ದು ನಂತರ ಟ್ರಸ್ಟಿನ ಧರ್ಮದರ್ಶಿಯಾಗಿ ನಂತರ ಖಜಾಂಚಿಯಾಗಿ ಕೆಲಸ ಮಾಡಿದ್ದ ಜಿ.ರಾಚಪ್ಪ ತಾನು ಟ್ರಸ್ಟಿಗೆ ಯಾವ ಸನ್ನಿವೇಶದಲ್ಲಿ ಮತ್ತು ಹೇಗೆ ಟ್ರಸ್ಟಿಗೆ ಬಂದು ಸೇರಿಕೊಂಡೆ ಎಂಬುದನ್ನು ಹೇಳಿದಾಗ ಎಲ್ಲರ ಕಣ್ಣಲ್ಲಿ ನೀರು ಬಂತು. ರಾಚಪ್ಪ ಯಾವ ಮುಚ್ಚುಮರೆಯಿಲ್ಲದೆ ತಮ್ಮ ಜೀವನದ ಸತ್ಯ ಸಂಗತಿಗಳನ್ನು ಹೇಳಿದಾಗ ಎಲ್ಲರೂ ದಿಗ್ಭ್ರಾಂತರಾಗಿ ಕುಳಿತರು. ಸತ್ಯಕ್ಕೆ ಮತ್ತು ವಾಸ್ತವಿಕ ಮಾತುಗಳಿರುವ ಶಕ್ತಿಯ ಅನುಭವ ಎಲ್ಲರಿಗೂ ಆಯಿತು. ಅದೇ ರೀತಿ ಸಂಕ್ಷಿಪ್ತ ಶಿಕ್ಷಣ ಶಾಲೆಯ ಹಳೆಯ ವಿದ್ಯಾರ್ಥಿನಿ ಸರಸ್ವತಿಯವರು ತಮ್ಮ ಅನುಭವಗಳನ್ನು ಹೇಳಿದಾಗ ಕೂಡ ಕೇಳುಗರು ಸರಸ್ವತಿಯವರ ನಿರ್ಭಿಡೆಯ ಮಾತುಗಳಿಂದ ಮತ್ತು ಅವರ ಜೀವನದ ಸಾಹಸಗಾಥೆಯಿಂದ ಪ್ರಭಾವಿತರಾಗಿ ಉಳಿಯದಿರಲು ಸಾಧ್ಯವಾಗಲಿಲ್ಲ. ನಂತರ ಮಾತನಾಡಿದ ಕರುಣಾಗೃಹದ ವಿದ್ಯಾರ್ಥಿ ಮತ್ತು ಈಗ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿರುವ ನರಸಿಂಹರವರು ಹೇಳಿದ ಅನೇಕ ಮಾತುಗಳು ಸಭೆಯ ಮೆಚ್ಚುಗೆಗೆ ಪಾತ್ರವಾದವು. ಅವರು ಟ್ರಸ್ಟಿನಲ್ಲಿ ಕಳೆದ ಬಾಲ್ಯದ ಜೀವನ ಮತ್ತು ವಿದ್ಯಾರ್ಥಿಯಾಗಿ ಪಡೆದ ಅನುಭವ, ಆನಂತರ ಹೊಸ ಜೀವನ ದಾರಿ ಕೇಂದ್ರದಲ್ಲಿಯ ಅನುಭವ ಇತ್ಯಾದಿಗಳನ್ನು ಸತ್ಯಕ್ಕೆ ಕಿಂಚಿತ್ತೂ ದೂರವಿಲ್ಲದಂತೆ ಮಾತನಾಡಿದ್ದು, ಪರೋಕ್ಷವಾಗಿ ಟ್ರಸ್ಟ್ ತನ್ನ ಹಳೆಯ ವಿದ್ಯಾರ್ಥಿಗಳ ಮೇಲೆ ಬೀರಿದ್ದ ಒಳ್ಳೆಯ ಸಂಸ್ಕಾರಕ್ಕೆ ಪುಷ್ಟಿ ಕೊಡುವಂಥದ್ದಾಗಿತ್ತು. ಅಲ್ಲದೇ ನರಸಿಂಹರವರು ಕೊನೆಯಲ್ಲಿ ತಾವೇ

ರಚಿಸಿದ "ಎಂದೋ ನಿನ್ನ ಬಳಿಯಲೊಮ್ಮೆ ಹಾಡಿದಂತೆ ನೆನಪಿದೆ" ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡಿ ತಾವು ಆಡಿದ ಮಾತುಗಳಿಗೆ ಟ್ರಸ್ಟಿನ ಬಗ್ಗೆ ಇರುವ ತಮ್ಮ ಕೃತಜ್ಞತಾ ಭಾವದ ಲೇಪನವನ್ನು ಕೊಟ್ಟರು. ಶಿವಕುಮಾರ್ ಕರುಣಾಗೃಹದ ಅಂಗಳದಲ್ಲಿ ಆಡಿದ ಆಟ-ಪಾಠಗಳಿಂದ ಆತ್ಮವಿಶ್ವಾಸವನ್ನು ಪಡೆದು, ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ ಕ್ರೀಡಾ ಪಟುವಾಗಿ ಭಾಗವಹಿಸಿದ ಅನುಭವವನ್ನು ಹೃದಯ ಪೂರ್ವಕವಾಗಿ ಹೇಳಿದ. ಆತನ ಮಾತುಗಳು ಎಲ್ಲರ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿದವು. ಶಿವಕುಮಾರ್‌ನ ಜೊತೆಗಾರ ಶಬೀರ್ ಅಹ್ಮದ್ ತಮ್ಮ ತೊದಲು ನುಡಿಯಲ್ಲಿ ಹೇಳಿದ ಮಾತುಗಳು ದೇಶದ ಇಂದಿನ ಪರಿಸ್ಥಿತಿಗೆ ಪಾರದರ್ಶಕವಾಗಿದ್ದವು. ಕರುಣಾಗೃಹದಲ್ಲಿ ತಾವೆಲ್ಲಾ ಹೇಗೆ ಮತಾತೀತರಾಗಿ ಸಹೋದರರಂತೆ ಬೆಳೆದು ಬಂದರೆಂಬುದನ್ನು ತಿಳಿಸಿದಾಗ ಅವರ ಮಾತುಗಳಿಗೆ ಸಭೆಯ ಮೆಚ್ಚುಗೆ ದೊರೆಯಿತು. ಸಂಕ್ಷಿಪ್ತ ಶಿಕ್ಷಣ ಶಾಲೆಯ ಇನ್ನೋರ್ವ ವಿದ್ಯಾರ್ಥಿನಿ ಗಾವಡಗೆರೆ ಪದ್ಮ ಮಾತನಾಡಲು ತುಂಬ ತವಕಿಸುತ್ತಿದ್ದರು. ಬೇರೆಯವರೆಲ್ಲ ಮಾತನಾಡುತ್ತಿದ್ದಾಗ ಅವರ ಮನಸ್ಸಿನಲ್ಲಿ ಟ್ರಸ್ಟಿನಲ್ಲಿಯ ಅನುಭವ ಒಂದೊಂದಾಗಿ ಅವರ ಜ್ಞಾಪಕ ಶಾಲೆಯಲ್ಲಿ ಮೇಲಕ್ಕೆ ಬರುತ್ತಿದ್ದವು. ಆದರೆ ಸಮಯದ ಅಭಾವ ಅವರಿಗೆ ವಂಚಿಸಿತು. ಇದೇ ರೀತಿ ಇನ್ನೂ ಅನೇಕರಿಗೆ ಉಂಟಾಯಿತು.

ಗಂಜಾಂನ ಎಸ್.ವಿಶ್ವನಾಥ್ ವೀಲ್ ಛೇರ್ ಮೇಲೆ ಕುಳಿತುಕೊಂಡು ಎಲ್ಲವನ್ನು ನೋಡುತ್ತಿದ್ದರು ಮತ್ತು ಕೇಳುತ್ತಿದ್ದರು. ಅವರದು ಮೊದಲಿನಿಂದಲೂ ಸಂಕೋಚ ಪ್ರವೃತ್ತಿ. ಹೆಚ್ಚು ಮಾತನಾಡುವ ಸ್ವಭಾವ ಅವರದ್ದಲ್ಲ. ಆದರೆ ಅವರಿಗೆ ಕೂಡ ಅಂದು ಮಾತನಾಡುವ ಬಯಕೆ ತುಂಬ ತೀವ್ರವಾಗಿತ್ತು ಎಂಬುದು ಅವರ ಮುಖಲಕ್ಷಣದಿಂದ ಕಂಡು ಬರುತ್ತಿತ್ತು. ಜನಪದ ವಿದ್ಯಾಲಯದ ಹಳೆಯ ವಿದ್ಯಾರ್ಥಿ ಮೇಲುಕೋಟೆಯ ಎಸ್.ಎನ್.ಸಿಂಹ ಈಗ ಓರ್ವ ಸಂಸಾರಿ. ಒಳ್ಳೆಯ ಬರಹಗಾರ ಮತ್ತು ಚಿಂತಕ. ಸಿಂಹರವರು ತಮ್ಮ ಭಾಷಣದಲ್ಲಿ ತಮ್ಮ ಮನೋಭಿತ್ತಿಯ ಮೇಲೆ ಉಂಟಾಗಿರುವ ಟ್ರಸ್ಟಿನ ಪ್ರಭಾವವನ್ನು ಎಳೆಯೆಳೆಯಾಗಿ ಬಿಚ್ಚಿ ಹೇಳಿದರು. ಅವರು ಬಾಲ್ಯದಿಂದಲೇ ಟ್ರಸ್ಟಿನ ಸಂಪರ್ಕಕ್ಕೆ ಬಂದದ್ದು ಅದರಿಂದ ತಮ್ಮ ಮೇಲೆ ಉಂಟಾಗಿರುವ ಪ್ರಭಾವವನ್ನು ಪರಿಣಾಮಕಾರಿಯಾಗಿ ಹೇಳಿದರು ಮತ್ತು ಸ್ವರಚಿತ ಕವನವನ್ನು ಓದಿದರು. ಸಭೆಯಲ್ಲಿ ಮುಖ್ಯವಾಗಿದ್ದವರು ಟ್ರಸ್ಟಿನ ಕೆಲ ಅಭಿಮಾನಿಗಳು ಮತ್ತು ದಾನಿಗಳು. ಟ್ರಸ್ಟ್ ಐವತ್ತು ವರ್ಷಗಳಿಂದ ನಡೆದುಕೊಂಡು ಬಂದಿರುವುದು ಅಭಿಮಾನಿಗಳು ಮತ್ತು ದಾನಿಗಳ ಸಹಾಯದಿಂದಲೇ. ಟ್ರಸ್ಟಿನ ಮಟ್ಟಿಗೆ ಅವರೆಲ್ಲ ಪ್ರತ್ಯಕ್ಷ ಕಾಣದ ದೈವವಾಗಿದ್ದಾರೆ, ಕಾಣದ ಅಭಿನಂದನೀಯ ಕೈಗಳಾಗಿದ್ದಾರೆ. ಟ್ರಸ್ಟಿನ ಅಂದಿನ ಸಭೆಯಲ್ಲಿ ಬಹಳಷ್ಟು ದಾನಿಗಳು ಬರಬೇಕಿತ್ತು. ಆದರೆ ಸಭೆ ಏರ್ಪಾಡಾಗಿದ್ದ ತಾರೀಖು ಮತ್ತು ದಿನ ಬಹಳಷ್ಟು ಜನರಿಗೆ ಅನೇಕ ಕಾರಣಗಳಿಂದ ಅನಾನುಕೂಲಕರವಾಗಿ ಪರಿಣಮಿಸಿತು. ಆದರೂ ಕೂಡ ಕೆಲವರು ತಮ್ಮ ಎಲ್ಲ ತೊಂದರೆಗಳನ್ನು ಬದಿಗಿಟ್ಟು ಬಂದಿದ್ದರು. ಅಂಥವರಲ್ಲಿ ಮುಖ್ಯರಾದವರು: ಎಮ್.ಕೆ.ಸುಬ್ಬರಾವ್ ಮತ್ತು ಬಂಧುಗಳು; ಶ್ರೀ ರಮಾಕಾಂತ್ ಆನವಟ್ಟಿ ಶ್ರೀಮತಿ ಆನವಟ್ಟಿ; ಚೊಕ್ಕೂಬಾಯಿ; ಧರ್ಮದರ್ಶಿಗಳಾದ ಶ್ರೀಕೆ.ಪ್ರಭಾಕರ್; ಡಾ॥ ಮನೋಹರ್; ಕೆ.ಶ್ರೀನಿವಾಸ್ ಇವರೆಲ್ಲರ ಸಹಾಯ ಮತ್ತು ಸಹಕಾರವನ್ನು ಮರೆಯುವಂತಿಲ್ಲ. ಪಕ್ಕದ ಹೊಸಹಳ್ಳಿ ಗ್ರಾಮದ ತಿಮ್ಮೇಗೌಡರು ಜನಪದ ಸೇವಾ ಟ್ರಸ್ಟಿನ ಹೊಸ ಜೀವನ ದಾರಿ

ಕೇಂದ್ರವು ಯಾವ ರೀತಿ ಸುತ್ತ ಮುತ್ತಲಿನ ಹಳ್ಳಿಗಳಿಗೆ ಮಾರ್ಗದರ್ಶಕವಾಗಿದೆ ಎಂಬುದನ್ನು ತಿಳಿಸಿದರು. ಆದರೆ ಗ್ರಾಮಸ್ಥರು ಹೆಚ್ಚಿನ ಪ್ರಯೋಜನ ಪಡೆಯಲು ಮುಂದಾಗುತ್ತಿಲ್ಲ ಎಂಬುದಕ್ಕೆ ವಿಷಾದ ವ್ಯಕ್ತಪಡಿಸಿದರು. ಅಂದಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವುದಕ್ಕೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಹಲವಾರು ವರ್ಷಗಳಿಂದ ವ್ಯವಸಾಯ ಕೆಲಸವನ್ನು ಮಾಡಿಕೊಂಡು ಬರುತ್ತಿರುವ ಕಾರ್ಯಕರ್ತರಾದ ಕಾಳಪ್ಪ, ನಾಗಣ್ಣ, ದೇವರಾಜ, ಲೋಕೇಶ್ ಇವರು ಬಹಳ ಮಟ್ಟಿಗೆ ಕಾರಣರಾಗಿದ್ದಾರೆ. ಅಲ್ಲದೇ ಹೊಸ ಜೀವನ ದಾರಿ ಕೇಂದ್ರದಲ್ಲಿ ತನ್ನ ಬಾಲ್ಯದಿಂದಲೂ ಜೀವನವನ್ನು ಸವೆಸಿರುವ ಕಾಸರಗೋಡಿನ ಶ್ರೀಕೃಷ್ಣನ ಸೇವೆಯನ್ನು ಮರೆಯುವಂತಿಲ್ಲ. ಕಾರ್ಯಕ್ರಮದ ಯಶಸ್ಸಿಗೆ ಖಾದಿ ಉದ್ಯಮದಲ್ಲಿ ತೊಡಗಿರುವ ಹೆಣ್ಣು ಮಕ್ಕಳ ಸಹಕಾರವು ಅದ್ವಿತೀಯವಾದದ್ದು. ಟ್ರಸ್ಟಿನ ಕಚೇರಿ ಕೆಲಸವನ್ನು ಹಲವಾರು ವರ್ಷಗಳಿಂದ ಬಹುಶ್ರದ್ಧೆಯಿಂದ ಶಿಸ್ತುಬದ್ಧವಾಗಿ ಮತ್ತು ಪ್ರಾಮಾಣಿಕವಾಗಿ ಮಾಡಿಕೊಂಡು ಬರುತ್ತಿರುವ ಅನ್ನದಾನಿ (ಅಂತೋಣಿ) ಹಾಗೂ ಖಾದಿ ಮಾರಾಟ ವಿಭಾಗವನ್ನು ನೋಡಿಕೊಳ್ಳುತ್ತಿರುವ ಮಂಜುನಾಥ್ ಇವರೆಲ್ಲರ ಸಹಕಾರ ಐವತ್ತನೇ ವರ್ಷದ ಸಮಾರಂಭದ ಯಶಸ್ಸಿಗೆ ಬಹಳಷ್ಟು ಕಾರಣವಾಗಿದೆ. ಅದೇ ರೀತಿ ಇನ್ನಿತರ ಟ್ರಸ್ಟಿನ ಕಾರ್ಯಕರ್ತರಾದ ಜಯಣ್ಣ, ರಾಮಣ್ಣ, ಮತ್ತು ರತ್ನ ಇವರೆಲ್ಲರೂ ತೆರೆಯ ಮರೆಯಲ್ಲಿದ್ದು ಯಶಸ್ಸಿಗೆ ದುಡಿದ್ದಾರೆ.

ಟ್ರಸ್ಟ್ ಸ್ಥಾಪನೆಯಾದ ದಿನದಿಂದಲೂ ಈ ಐವತ್ತು ವರ್ಷಗಳ ಟ್ರಸ್ಟಿನ ಸುದೀರ್ಘ ಸೇವಾ ಯಾತ್ರೆಗೆ ತಮ್ಮೆಲ್ಲ ನೈತಿಕಶಕ್ತಿ, ಬುದ್ಧಿಶಕ್ತಿ ಮತ್ತು ತ್ಯಾಗಶಕ್ತಿಗಳಿಂದ ಟ್ರಸ್ಟಿನ ಕಾರ್ಯಕ್ಕೆ ಸಾಫಲ್ಯತೆ ಕೊಡುತ್ತ ಬಂದಿರುವ ಗಿರಿಜಾ ಕೌಲಗಿಯವರು ಸ್ವರ್ಣ ಮಹೋತ್ಸವದ ಸಮಾರಂಭದಲ್ಲಿ ಎಲೆಮರೆಯ ಕಾಯಿಯಂತೆ ಖಾದಿ ಬಿಳಿ ಸೀರೆ ತೊಟ್ಟುಕೊಂಡು ಕಾರ್ಯಕ್ರಮವನ್ನೆಲ್ಲ ಮೌನವಾಗಿ ವೀಕ್ಷಿಸುತ್ತಿದ್ದರು. ಟ್ರಸ್ಟಿನ ಐವತ್ತು ವರ್ಷಗಳ ಜೀವನದ ಏರಿಳಿತಗಳಿಗೆ ಸಾಕ್ಷಿಯಾಗಿರುವ ಅಂದಿನ ಬೈಲವ್ವ ಇಂದಿನ ಭಾಗೀರಥಿಯಾಗಿ ದೂರದ ಆಲದಮರದ ಕೆಳಗೆ ಕುಳಿತು ಎಲ್ಲವನ್ನು ವೀಕ್ಷಿಸುತ್ತಿದ್ದರು. ಭಾಗೀರಥಿ ಕರುಣಾಗೃಹಕ್ಕೆ ಸಮಾಜ ಕಲ್ಯಾಣ ಇಲಾಖೆ ಮೂಲಕ ಸೇರಿದಾಗ ಸುಮಾರು ಎಂಟು ವರ್ಷದ ಬಾಲಕಿ. ಎಡಗಾಲಿನ ಪಾದ ಮಡಚಿದೆ ಬಲಗೈನಲ್ಲಿ ಶಕ್ತಿಯಿಲ್ಲ. ಹಿಂದುಳಿದ ವರ್ಗಕ್ಕೆ ಸೇರಿದವರು. ಅಂದಿನಿಂದ ಇಂದಿನವರೆಗೆ. ಕರುಣಾಗೃಹದಲ್ಲಿ ಇದ್ದು ದೊಡ್ಡವರಾಗಿರುವಂಥವರು. ಟ್ರಸ್ಟಿನ ಐವತ್ತುವರ್ಷದ ಸೇವೆಯ ದಾಖಲೆ ಕೇವಲ ಮೂರು ಗಂಟೆಯ ಅವಧಿಯೊಳಗೆ ಮುಗಿಯಿತು. ಕಾಲದ ಅನಂತ ಪ್ರವಾಹದಲ್ಲಿ ಟ್ರಸ್ಟಿನ ಐವತ್ತು ವರ್ಷಗಳ ಸೇವೆಗೆ ಯಾವ ಅಸ್ತಿತ್ವವೂ ಇಲ್ಲ. ಅಸ್ತಿತ್ವದ ಗುರುತೇನಾದರೂ ಉಳಿದಿದ್ದರೆ ಮತ್ತು ಸಮಾರಂಭ ಯಶಸ್ವಿಯಾಯಿತು ಮತ್ತು ಟ್ರಸ್ಟಿನ ಸಾಧನೆ ವಿಶೇಷವಾದುದು ಎಂದೆಲ್ಲಾ ಅಭಿಪ್ರಾಯ ಮೂಡಿದ್ದರೆ ಅದಕ್ಕೆ ಮುಖ್ಯಕಾರಣ ಅಂದಿನ ಸಮಾರಂಭದಲ್ಲಿ ಹಳೆಯ ವಿದ್ಯಾರ್ಥಿಗಳು ಟ್ರಸ್ಟಿಗೆ ಸಲ್ಲಿಸಿದ ಕೃತಜ್ಞತಾ ಭಾವ! ಐವತ್ತು ವರ್ಷಗಳ ಹಿಂದೆ ಟ್ರಸ್ಟ್ ಶೂನ್ಯದೊಂದಿಗೆ ತನ್ನ ಕಾರ್ಯ ಪ್ರಾರಂಭಿಸಿ ಐವತ್ತನೇ ವರ್ಷದ ಸಮಾರಂಭದಲ್ಲಿ ಶೂನ್ಯದೊಂದಿಗೆ ಬೆರೆತು ಹೊಸ ಸೇವಾ ಚಕ್ರವನ್ನು ಪ್ರಾರಂಭಿಸಿತು. ಟ್ರಸ್ಟಿನ ಕಾರ್ಯಕ್ರಮಗಳು ಮುಂದುವರೆದಲ್ಲಿ ಮುಂಬರುವ ಟ್ರಸ್ಟಿನ ಕರ್ಣಾಧಾರರು ಕಾರಣರಾಗುತ್ತಾರೆ. ಅಂಥ ಕಾರಣಪುರುಷರಿಗಾಗಿ ಟ್ರಸ್ಟಿನ ಸಕಲ ಅಭಿಮಾನಿಗಳು ಎದುರು ನೋಡುತ್ತಿದ್ದಾರೆ.

(ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

'ಮಹಾರಾಷ್ಟ್ರದಲ್ಲಿ ಒಂದು ವೈಚಾರಿಕ ಶಿಬಿರವನ್ನು ಏರ್ಪಡಿಸಬೇಕು. ಅದರಲ್ಲಿ ಕೇವಲ ವಿಚಾರವನ್ನು ಹೇಳುವುದಕ್ಕಾಗಿಯೇ ಒಂದು ಭಾಷಣಮಾಲೆಯನ್ನು ಇಡಿಸಬೇಕು' ಎಂಬ ಕಲ್ಪನೆಯಿಂದ ಆಚಾರ್ಯ ದಾದಾ ಧರ್ಮಾಧಿಕಾರಿಯವರ 'ಸರ್ವೋದಯ ದರ್ಶನ' ಹೊರಟಿತು. ವಿಚಾರ, ಅಹಿಂಸೆ, ಸಹಯೋಗ, ಪ್ರತೀಕಾರಗಳು, ಸಾರ್ವಭೌಮ ಮೌಲ್ಯಗಳು, ಮಾನವ್ಯ, ಸಂಯೋಜನೆ, ಉತ್ಪಾದನೆ, ಕ್ರಾಂತಿ, ಜನತಂತ್ರ ಮುಂತಾದ ಪ್ರಧಾನ ಶಬ್ದಗಳು ಮತ್ತು ಆ ಶಬ್ದಗಳಿಂದ ವ್ಯಕ್ತವಾಗುವ ಕಲ್ಪನೆ-ಭಾವನೆಗಳು ಈ ಗ್ರಂಥದಲ್ಲಿ ಸಮಗ್ರವಾಗಿ ನಿರೂಪಿಸಲ್ಪಟ್ಟಿವೆ. ಅದರೆ ಇವೆಲ್ಲವನ್ನೂ ತನ್ನ ಹೊಟ್ಟೆಯಲ್ಲಿ ಸಮಾವೇಶಮಾಡಿಕೊಳ್ಳುವಂಥ ಒಂದೇ ಶಬ್ದವನ್ನು ಹೇಳುವುದಾದರೆ ಅದು 'ಸರ್ವೋದಯ' ಮತ್ತು ಅದರ ಕಲ್ಪನೆ ಎಂದು ಹೇಳಬಹುದು. 'ಸ್ವರಾಜ್ಯ' ಮತ್ತು 'ಸತ್ಯಾಗ್ರಹ' ಶಬ್ದಗಳು ನೋಡಲು ಸಾಮಾನ್ಯವಾಗಿ ಕಂಡರೂ ಆ ಶಬ್ದಗಳ ಅಥವಾ ಮಂತ್ರಗಳ ಹಿಂದೆ ಒಂದು ಭೂಮಿಕೆ ಇದೆ, ಇತಿಹಾಸವಿದೆ, ಅಥವಾ ತಪಸ್ಸು ಮತ್ತು ಸಾಧನೆಯಿದೆ. 'ಸರ್ವೋದಯ' ಕೂಡ ಅಂಥದೇ ಒಂದು ಶಬ್ದ. ಗಾಂಧೀಜಿಯವರು 'ಆತ್ಮಕಥೆಯಲ್ಲಿ' ತಮ್ಮ ಮೇಲೆ ರಾಯಚಂದ್ ಭಾಯಿ, ರಸ್ಕಿನ್, ಟಾಲ್‌ಸ್ಟಾಯ್ ಇವರ ಪರಿಣಾಮ ಬಹಳವಾಯಿತೆಂದು ಹೇಳಿದ್ದಾರೆ. ಸುಮಾರು ನೂರು ವರ್ಷಗಳ ಮೊದಲು ಪ್ರಸಿದ್ಧವಾದ ರಸ್ಕಿನ್‌ನ Unto This Last ಗ್ರಂಥ ಗಾಂಧೀಜಿಯವರ ಮನಸ್ಸಿನ ಮೇಲೆ ಅತ್ಯಂತ ಪ್ರಭಾವ ಬೀರಿತು. ಅವರು ಅದನ್ನು ಗುಜರಾತಿಗೆ ಭಾಷಾಂತರಮಾಡಿ ಅದಕ್ಕೆ 'ಸರ್ವೋದಯ' ಎಂದು ಕರೆದರು. 'I will give unto this last even as unto you' (ನಿನಗೆ ಕೊಟ್ಟಷ್ಟೇ ಈ ಅಂತ್ಯನಿಗೆ ಅಂದರೆ ಕೊನೆಗೆ ಬಂದವನಿಗೂ ಕೂಡ ನಾನು ಕೊಡುತ್ತೇನೆ.) ಇದಕ್ಕೆ 'ಅಂತ್ಯೋದಯ' ಎಂಬ ಹೆಸರು ಕೊಡಬೇಕೆಂದು ಅನೇಕ ಜನರ ಆಗ್ರಹವಿತ್ತು, ಇನ್ನೂ ಇದೆ. ಎಲ್ಲಕ್ಕೂ ಕೆಳಗಿನವನ ಉದಯವಾದರೆ ಮಧ್ಯಮ ಮತ್ತು ಮೇಲಿನ ಮನುಷ್ಯನ ಉದಯ ತಾನೇ ಆಗುತ್ತದೆಂಬ ಮಾತು ಗೃಹೀತವಿದೆ. ಆದರೂ ಅಂತ್ಯೋದಯದಿಂದ ಆಗುವ ಕಲ್ಪನೆ ಆಂಶಿಕವಾದುದು, ಸರ್ವರದೂ ಅಲ್ಲ. ಅಲ್ಲದೆ ನಮಗೆ 'ಸರ್ವಭೂತಹಿತ' ಬೇಕಾಗಿದೆ. ಆದ್ದರಿಂದ 'ಸರ್ವೋದಯ' ಶಬ್ದವನ್ನೇ ಇಡಲಾಯಿತು. ಗಾಂಧೀಜಿಯವರ ಆಯುಷ್ಯವೆಲ್ಲ ಸ್ವಾತಂತ್ರ್ಯಪ್ರಾಪ್ತಿಯ ಧ್ಯೇಯಕ್ಕೂ ಉದ್ಯೋಗಕ್ಕೂ ವ್ಯಯವಾಯಿತು. ಆದರೂ ಹರಿಜನರ ಉದ್ಧಾರ, ಹಳ್ಳಿಗಳ ಆರ್ಥಿಕೋನ್ನತಿ, ಅಬಲರನ್ನು ಸಬಲರನ್ನಾಗಿ ಮಾಡುವುದು ಮುಂತಾದ ಅಂತ್ಯೋದಯದ ಕಾರ್ಯಗಳು ಅನ್ಯಕಾರ್ಯಗಳ ಜೊತೆಗೆ ನಡೆದೇ ಇದ್ದುವು.

ಗಾಂಧೀಜಿಯವರ ನಿರ್ವಾಣದ ಬಳಿಕ ಅವರ ವಿಚಾರಧಾರೆಯಲ್ಲಿ ವಿಶ್ವಾಸ, ಶ್ರದ್ಧೆ, ನಿಷ್ಠೆಯುಳ್ಳ ಜನರು ಸೇವಾಗ್ರಾಮದಲ್ಲಿ ಸೇರಿ ಕೆಲವೊಂದು ನಿರ್ಣಯ ತೆಗೆದುಕೊಂಡರು. ಅವುಗಳಲ್ಲಿ 'ಸರ್ವೋದಯ ಸಮಾಜ ಸ್ಥಾಪನೆ' ಮಹತ್ವದ ನಿರ್ಣಯವಾಗಿತ್ತು. ಈ ಮಾತಿಗೆ ಈಗ ಎಂಟು ವರ್ಷಗಳಾದವು. ಮೊದಲಿನ ಎರಡು-ಮೂರು ವರ್ಷಗಳಲ್ಲಿ ಗಾಂಧೀಯವರ ಅನುಯಾಯಿಗಳು ತಮ್ಮ ತಮ್ಮ ವಿಚಾರ ಮತ್ತು ಕಲ್ಪನೆಯಂತೆ ಅಂದರೆ ಮೊದಲಿನಂತೆಯೇ ತಮ್ಮ ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ನಿರತರಾಗಿದ್ದರು. 'ಆದರೆ ಮುಂದೆ ಏನು? ಮತ್ತು ಹೇಗೆ?' ಎಂಬ ಬಗೆಗೆ ಯಾರಿಗೂ ಸ್ವಚ್ಛ ಪ್ರಕಾಶ ಕಾಣಿಸಲಿಲ್ಲ. ಕಾಲ ಯಾರ ಸಲುವಾಗಿಯೂ ನಿಲ್ಲಲಿಲ್ಲ. ಸರ್ವೋದಯದ ವಾರ್ಷಿಕ ಸಮ್ಮೇಲನಗಳು ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಲೇ ಇದ್ದುವು. ಆದರೂ ಅದರಿಂದ ವಿಶೇಷ ಪ್ರಯೋಜನವಾಗುತ್ತಿರಲಿಲ್ಲ. ವಿನೋಬಾ ತಮ್ಮ ಪವನಾರದ ಪರಂಧಾಮ ಆಶ್ರಮದಲ್ಲಿ ತಮ್ಮ ಭಿನ್ನ ಭಿನ್ನ ಪ್ರಯೋಗಗಳನ್ನೂ ಸಾಧನೆಗಳನ್ನೂ ಮಾಡುತ್ತಿದ್ದರು. ೧೯೫೧ರಲ್ಲಿ ಶಿವರಾಮಪಲ್ಲಿಯ ಸರ್ವೋದಯ ಸಮ್ಮೇಲನದ ಸಮಯ ಹತ್ತಿರ ಬಂದಿತ್ತು. ಶಂಕರರಾವ್ ದೇವ್ ಹೇಳಿದರು: 'ನೀವು ಬರದಿದ್ದರೆ ಸಮ್ಮೇಲನವನ್ನು ನಿಲ್ಲಿಸಿಬಿಡೋಣ.' ವಿನೋಬಾರಿಗೆ ಈ ಮಾತಿನ ಇಂಗಿತಾರ್ಥ ಹೊಳೆಯಿತು. ಅವರು ಸಮ್ಮತಿ ಕೊಟ್ಟರು. ಪವನಾರದಿಂದ ಶಿವರಾಮಪಲ್ಲಿಗೆ ಅವರು ತಮ್ಮ ಸಹಕಾರಿಗಳೊಂದಿಗೆ ನಡೆಯುತ್ತಲೇ ಹೊರಟರು. ಜನರಿಗೆ ಗಾಂಧೀಜಿಯವರ ದಾಂಡೀ ಯಾತ್ರೆ, ಹರಿಜನ ಯಾತ್ರೆಗಳ ನೆನಪಾಯಿತು. ಸ್ವರಾಜ್ಯ ಸೂರ್ಯನೇನೋ ಮೂಡಿದ್ದ. ಆದರೆ ಜನರವರೆಗೆ ಆತನ ಕಾವು ಹೋಗಿ ಮುಟ್ಟಲು ಇನ್ನೂ ಅವಕಾಶವಿತ್ತು. ಸಮ್ಮೇಳನ ಮುಗಿದ ಮೇಲೆ ಸಾಮ್ಯವಾದಿಗಳ ಹಾಗೂ ಸರಕಾರದ ಚಕ್ರದಲ್ಲಿ ಸಿಕ್ಕ ತೆಲಂಗಾಣದಲ್ಲಿ ವಿನೋಬಾ ತಮ್ಮ ಪಾದಯಾತ್ರೆಯನ್ನು ಕೈಗೊಂಡರು. ಆ ಯಾತ್ರೆಯಲ್ಲಿ ಪೋಚಮಪಲ್ಲಿಯಲ್ಲಿ ಏಪ್ರಿಲ್ ೧೮ನೇ ತಾರೀಖಿನಂದು ಅವರಿಗೆ ಒಂದು ನೂರು ಎಕರೆ ಭೂಮಿದಾನ ದೊರೆಯಿತು. ಅಲ್ಲಿಂದಲೇ ಭೂದಾನ ಗಂಗೆಯ ಉಗಮವಾಯಿತು. ಈಗ ಐದು-ಆರು ವರ್ಷಗಳ ಮೇಲೆ ಅದು ಎರಡೂ ದಂಡೆ ತುಂಬಿ 'ಪಾಪ,ತಾಪ,ಹಾರೀತ' ಪ್ರವಹಿಸುತ್ತಿದೆ. ಭೂಮಿಯ ಆರನೆಯ ಒಂದು ಭಾಗದ ಬೇಡಿಕೆಯಿಂದ ಈಗ ಗ್ರಾಮ ದಾನ, ಫಿರಕಾದಾನ, ತಾಲೂಕ್‌ದಾನ, ಜಿಲ್ಲಾದಾನದವರೆಗೂ ಆಂದೋಲನ ಬಂದು ಮುಟ್ಟಿದೆ. 'ಸರ್ವೋದಯ' ಸಾಧ್ಯ- ಈಗ ದೃಷ್ಟಿ ಪಥದಲ್ಲಿ ಬರಹತ್ತಿದೆ. ಸಾಧನ-ಮುಖ್ಯವಾಗಿ ವಿಚಾರ ಕ್ರಾಂತಿ. ಭೂದಾನದಲ್ಲಿ ಮುಂದೆ ಸಂಪತ್ತಿದಾನ, ಶ್ರಮದಾನ, ಜೀವದಾನ ಮೊದಲಾದ ದಾನಗಳ ಸಮಾವೇಶವಾಗಿದೆ. ಜೀವನದಾನ ಏತಕ್ಕಾಗಿ? 'ಭೂದಾನ ಯಜ್ಞದ ಮೂಲಕ ಗ್ರಾಮೋದ್ಯೋಗ ಪ್ರಧಾನ ಅಹಿಂಸಕ ಕ್ರಾಂತಿಗಾಗಿ'. ಈ ಉದ್ದವಾದ ಮಂತ್ರ ಕೇಳಿದ ಕೂಡಲೆ ಲೋಕಮಾನ್ಯ ಟಿಳಕರ 'ಗೀತೆ'ಯ ತಾತ್ಪರ್ಯದ-ರಹಸ್ಯದ ನೆನಪಾಗುತ್ತದೆ. 'ಜ್ಞಾನದ ಮೂಲಕ ಭಕ್ತಿ ಪ್ರಧಾನ ನಿಷ್ಕಾಮ ಕರ್ಮಯೋಗ'. ಗಾಂಧೀಯವರು 'ನಿಷ್ಕಾಮ ಕರ್ಮಯೋಗ'ದ ಬದಲು 'ಅನಾಸಕ್ತಿ

ಯೋಗ' ಎಂದು ಹೇಳಿದರು. 'ಜ್ಞಾನ, ಭಕ್ತಿ, ಕರ್ಮ'ತ್ರಯಗಳ ಮೂಲ ಶೋಧ ಮಾಡಲು ಹೋದಾಗ ಪಾಣಿನಿಯವರೆಗೆ ಹೋಗಬೇಕಾಗುತ್ತದೆ. 'ಪ್ರಜ್ಞಾ-ಶ್ರದ್ಧಾ-ಅರ್ಚಾಭ್ಯೋಣಃ'(೫-೨-೧೦೧) ಈ ಸೂತ್ರದಲ್ಲಿ ಪಾಣಿನಿ ಪ್ರಾಜ್ಞಃ(=ಪ್ರಜ್ಞಾವಾನ್); ಶ್ರಾದ್ಧಃ(=ಶ್ರದ್ಧಾವಾನ್); ಆರ್ಚಃ(=ಅರ್ಚಾವಾನ್) ಎಂಬ ಮೂರು ಶಬ್ದಗಳನ್ನು ಸಾಧಿಸಿದ್ದಾನೆ. ಅರ್ಚಾ=ಮೂರ್ತಿಪೂಜೆ-ಅರ್ಚಾ, ಅಥವಾ ಮೂರ್ತಿಯೇ. ಮಹಾಭಾರತದಲ್ಲಿ ಪತಂಜಲಿ 'ಮೌರ್ಯರ್ಹಿರಣ್ಯಾರ್ಥಿಭಿಃ ಅರ್ಚಾಃ ಪ್ರಕಲ್ಪಿತಾಃ' ಎಂದು ಮೂರ್ತಿಯ ಮತ್ತು ಮೂರ್ತಿಪೂಜೆಯ ಉಲ್ಲೇಖ ಮಾಡಿದ್ದಾನೆ. ಕರ್ಮ ಮತ್ತು ಅರ್ಚೆಯ ಸಂಬಂಧವನ್ನು ಗೀತೆಯಲ್ಲಿ(೧೮-೪೬) 'ಸ್ವಕರ್ಮಣಾ ತಮಭ್ಯರ್ಚ' ಎಂಬಲ್ಲಿ ಮಾಡಲಾಗಿದೆ. ತಾತ್ಪರ್ಯ: ಈ ಪರಂಪರೆಯನ್ನು ಎರಡೂವರೆ ಮೂರು ಸಾವಿರ ವರ್ಷಗಳ ವಾಙ್ಮಯದ ಆಧಾರದ ಮೇಲಿಂದ ತೋರಿಸಬಹುದು. ಈ ಪ್ರಕಾರ ಬೇರೆ ಬೇರೆ ರೂಪಧಾರಣಮಾಡುತ್ತ ಈ 'ಸರ್ವಭೂತಹಿತ' ಅರ್ಥಾತ್ 'ಸರ್ವೋದಯ' ವಿಚಾರ ನಮ್ಮ ಕಾಲದವರೆಗೆ ಬಂದು ಮುಟ್ಟಿದೆ.

'ಸರ್ವೋದಯ' ಮತ್ತು ಅದರ ಸಿದ್ಧಿಗಾಗಿ 'ಭೂದಾನ', 'ಸಂಪತ್ತಿದಾನ', 'ಶ್ರಮದಾನ' ಮೊದಲಾದ ಆಂದೋಲನಗಳ ಪರಿಶೀಲನೆ ಮಾಡಿದ್ದಾಯಿತು. ಇನ್ನು ಗ್ರಂಥದಲ್ಲಿ ಬಂದ ಒಂಬತ್ತು ಶಬ್ದಗಳಲ್ಲಿ 'ದರ್ಶನ' ಶಬ್ದದ ವಿಚಾರ ಮಾಡುವುದು ಕ್ರಮಪ್ರಾಪ್ತವಾಗುತ್ತದೆ. ನಮ್ಮ ತತ್ತ್ವಜ್ಞಾನದಲ್ಲಿ ಷಡ್ದರ್ಶನಗಳು ಪ್ರಸಿದ್ಧವಿವೆ. ದರ್ಶನವೆಂದರೆ ಒಂದು ದೃಷ್ಟಿ-ದಿಟ್ಟಿ, ...ಮೀಮಾಂಸಾ'ದಲ್ಲಿ, (೧) ಪೂರ್ವ ಮೀಮಾಂಸಾ, (೨) ಉತ್ತರ ಮೀಮಾಂಸಾ ಅಥವಾ ವೇದಾಂತ(ಬಾದರಾಯಣ), (೩) ನ್ಯಾಯ(ಗೌತಮ) (೪) ವೈಶೇಷಿಕ(ಕಣಾದ), (೫) ಸಾಂಖ್ಯ (ಕಪಿಲ) (೬) ಯೋಗ (ಪತಂಜಲಿ)- ಈ ಆರು ದರ್ಶನಗಳು ಅಥವಾ.......... ಈ ದೃಷ್ಟಿಯಿಂದ 'ದರ್ಶನ' ಶಬ್ದವನ್ನು ಸಾಂಖ್ಯಯೋಗದಲ್ಲಿ ಉಪಯೋಗಿಸಿದ್ದು ಮೊಟ್ಟಮೊದಲು ನಮಗೆ ಮಹಾಭಾರತದಲ್ಲಿ ಕಂಡುಬರುತ್ತದೆ:

'ತುಲ್ಯಂ ಶೌಚಂ ತಯೋರ್ಯುಕ್ತಂ ದಯಾ ಭೂತೇಷು ಚಾನಘ ।
ವ್ರತಾನಾಂ ಧಾರಣಂ ತುಲ್ಯಂ, ದರ್ಶನಂ ನ ಸಮಂ ತಯೋಃ॥

(ಭಂಡಾರ್ಕರ್ ಸಂಶೋಧಿತ ಆವೃತ್ತಿ- ಶಾಂತಿ ಪರ್ವ, ೨೮೯-೯)

ಭೀಷ್ಮರು ಹೇಳಿದ ಈ ಶ್ಲೋಕದಲ್ಲಿ ಸಾಂಖ್ಯ ಮತ್ತು ಯೋಗಗಳ ಆಚಾರಗಳು-ಶೌಚ, ಭೂತದಯಾ, ವ್ರತಧಾರಣ-ಸಮಾನವಿರುತ್ತವೆಂದು ಹೇಳಿದೆ. ಆದರೆ ಅವರಿಬ್ಬರ 'ದರ್ಶನ'(ತತ್ವಜ್ಞಾನ) 'ಸಮ' ಅಂದರೆ ಸಮಾನ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆಚಾರದಲ್ಲಿ ಬಂಧನ, ವಿಚಾರದಲ್ಲಿ ಮುಕ್ತಿ- ಇದು ಹಿಂದೂ ಸಮಾಜದ ಮತ್ತು ತತ್ತ್ವಜ್ಞಾನದ ವೈಶಿಷ್ಟ್ಯ. ಕಾಲಾಂತರದಿಂದ ಭಿನ್ನ ವಿಚಾರದ ಪರಿಣಾಮ ಭಿನ್ನ ಆಚಾರದಲ್ಲಿ ಪರಿವರ್ತನೆ ಆದರೂ ಅಡ್ಡಿ ಇಲ್ಲ. 'ಅನ್ಯೇ ಕೃತಯುಗೇ ಧರ್ಮಾಃ....... ಯುಗಹ್ರಾಸಾನುರೂಪತಃ' ಇದರಲ್ಲಿ ಆಚಾರ ಭಿನ್ನತೆ ಕಂಡುಬರುತ್ತದೆ. ನಾಲ್ಕು ವರ್ಣಗಳು ಹೋಗಿ ಮುಂದೆ ನೂರಾರು ಜಾತಿಗಳಾದಂತೆ ಆರು ದರ್ಶನಗಳು

ಸಾಯಣ ಮಾಧವನ 'ಸರ್ವದರ್ಶನ ಸಂಗ್ರಹ'ದ ಕಾಲದ ವರೆಗೆ (ಕ್ರಿ. ಶ. ೧೪ನೆಯ ಶತಕ) ಹದಿನಾರು ಆದವು. ಅದರಲ್ಲಿ ಚಾರ್ವಾಕ, ಬೌದ್ಧ, ಜೈನ, ಶೈವ, ಪಾಶುಪತ, ಪಾಣಿನಿ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಅನೇಕ 'ದರ್ಶನ'ಗಳು ಕೂಡಿಕೊಂಡವು. ಈ ದರ್ಶನಗಳ ಮೇಲೆ ಅನೇಕ ಆಚಾರ್ಯರು ಭಾಷ್ಯ ಬರೆದರು. ಅದಕ್ಕೆ ಮುಂದೆ ಟೀಕಾಗ್ರಂಥಗಳಾದವು; ಇನ್ನೂ ಆಗುತ್ತಿವೆ. ಆಧುನಿಕ ಕಾಲದಲ್ಲಿ ಈ ದರ್ಶನಗಳ ಪಂಙ್ಕ್ತಿಯಲ್ಲಿ 'ಸರ್ವೋದಯ ದರ್ಶನ'ವೂ ಬರುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಷ್ಟೇ ಅಲ್ಲ, ಈ ಎಲ್ಲ ದರ್ಶನಗಳನ್ನು ಹೊಟ್ಟೆಯಲ್ಲಿ ಹಾಕಿಕೊಂಡು, ಅವಿರೋಧವಾಗಿ ಸಮಾವಿಷ್ಟ ಮಾಡಿಕೊಳ್ಳುವ ಸಾಮರ್ಥ್ಯ ಈ ಹೊಸ ದರ್ಶನದಲ್ಲಿದೆ. ಜೀವನದ ಎಲ್ಲ ಅಂಗಗಳ ಸ್ಪರ್ಶವೂ ಅದರಲ್ಲಿದೆ. ವ್ಯಕ್ತಿ, ಸಮಾಜವೆರಡರ ವಿಚಾರವನ್ನೂ ಅದರಲ್ಲಿ ಮಾಡಲಾಗಿದೆ. ಸಾರ್ವದೇಶಿಕ ಮತ್ತು ಸಾರ್ವಕಾಲಿಕ ಆಗುವ ಶಕ್ತಿ ಅದರಲ್ಲಿ ಬೀಜರೂಪವಾಗಿ ವಾಸವಾಗಿದೆ. ಬಂಡವಾಳ ವಾದ, ಸಮಾಜವಾದ, ಸಾಮ್ಯವಾದಗಳು ಪರಸ್ಪರರಲ್ಲಿ ಕಚ್ಚಾಡುತ್ತಿರುವವು. ಏಕೆಂದರೆ ಹೇಳಿ ಕೇಳಿ ಅವು ವಾದಗಳೇ. ಸರ್ವೋದಯ 'ದರ್ಶನ'ವಂತೂ ಇದ್ದೇ ಇದೆ. ಆದರೆ ಅದು 'ಯೋಗ'ವೂ ಅಹುದು.

'ಪರಸ್ಪರಂ ವಿರುಧ್ಯಂತೇ ತೈರಯಂ ನ ವಿರುಧ್ಯತೇ'
(ಗೌಡಪಾದಕಾರಿಕಾ, ೩-೧೭)

ಎಂದು ಗೌಡಪಾದಾಚಾರ್ಯರು ಅದ್ವೈತದ ವಿಷಯಕ್ಕೆ ಇತರ ದ್ವೈತವಾದವನ್ನು ಕುರಿತು ಉದ್ಗಾರ ತೆಗೆದಿದ್ದಾರೆ. ಅದು ಈ 'ಸರ್ವೋದಯ ಯೋಗ'ಕ್ಕೆ ಅಕ್ಷರಶಃ ಅನ್ವಯಿಸುವಂತಿದೆ.

* * *

ಖಾದಿ ವಿಚಾರ

ತಮ್ಮ ಇಡೀ ಜೀವನ ಕಾಲದಲ್ಲಿ ಗಾಂಧೀಜಿ ಕಲಾಕಾರರ ಮತ್ತು ವ್ಯಂಗ್ಯ ಚಿತ್ರಕಾರರ ಮಹತ್ವಪೂರ್ಣ ವಿಷಯವಾಗಿದ್ದರು. ಕಲಾಕಾರರಿಗಾಗಿ ಮತ್ತು ವ್ಯಂಗ್ಯಚಿತ್ರಕಾರರಿಗಾಗಿ ಅವರು ಹೊಸ ಹೊಸ ವಿಷಯಗಳನ್ನು ಹುಡುಕಿದರು. ಗಾಂಧೀಜಿಯವರ ಎಲ್ಲ ವ್ಯಂಗ್ಯಚಿತ್ರಗಳಲ್ಲಿ ಅವರು ಚರಕಾವನ್ನು ವಯೊಲಿನ್ ರೀತಿ ನುಡಿಸುತ್ತಿರುವಂತೆ ಚಿತ್ರಿಸಲಾದ ವ್ಯಂಗ್ಯಚಿತ್ರ ಮಹತ್ವಪೂರ್ಣದ್ದಾಗಿದೆ. ಗಾಂಧೀಜಿ ಚರಕಾದಿಂದ ಯಾವ ಪ್ರಕಾರದ ಧ್ವನಿಯನ್ನು ಹೊರಡಿಸುತ್ತಿದ್ದಾರೊ ಅದು ನಿರುದ್ಯೋಗ, ಹಸಿವೆ, ಸಾಮಾಜಿಕ ಸಮರಸತೆ, ಸ್ವಾತಂತ್ರ್ಯ ಮುಂತಾದವುಗಳ ಧ್ವನಿ ಹೆಚ್ಚು ಮಹತ್ವಪೂರ್ಣದ್ದಾಗಿದೆ ಎಂದು ತಿಳಿಸುವ ಉದ್ದೇಶ ಆ ವ್ಯಂಗ್ಯಚಿತ್ರಕಾರರದ್ದಾಗಿರಬಹುದು. ಗಾಂಧೀಜಿಯವರಿಗೆ ಚರಕದ ಮೇಲೆ ತೆಗೆಯುವ ನೂಲುವಿಕೆಯಲ್ಲಿ ಸಂಗೀತ ಕೇಳುತ್ತದೆ ಎಂಬುದು ನಿಜ. ತಮ್ಮ ಪಂಜಾಬ್ ಮತ್ತು ಬಂಗಾಳದ ಯಾತ್ರೆಗಳಲ್ಲಿ ಅವರು ಅಲ್ಲಿಯ ಮಹಿಳೆಯರ ಮೂಲಕ ತೆಗೆಯಲಾದ ದಾರ ಮತ್ತು ಖಾದಿ ಬಟ್ಟೆಯ ಸೌಂದರ್ಯದ ವರ್ಣನೆಯನ್ನು ಪತ್ರಗಳು ಮತ್ತು ಲೇಖನಗಳ ಮೂಲಕ ಬಹಳ ಸಹಜ ರೂಪದಲ್ಲಿ ಮಾಡಿದ್ದಾರೆ. ಅವರಿಗೆ ಚರಕಾದ ಮೇಲಿನ ನೂಲುವಿಕೆಯಿಂದ ಉಂಟಾಗುತ್ತಿದ್ದ ಸಂಗೀತದಲ್ಲಿ ದೇಶದ ಸ್ವಾತಂತ್ರ್ಯದ ಸಂಗೀತ ಕೇಳಿಬರುತ್ತಿತ್ತು. ಚರಕಾದ ಸಂಗೀತದ ಬಗ್ಗೆ ಅವರು ಹೀಗೆ ಬರೆದಿದ್ದಾರೆ.

"ಯಾವ ರೀತಿ ಸಾವಿರಾರು ಹೋಟೆಲ್‌ಗಳು ಇದ್ದರೂ ಕೂಡ ತಾಯಿಯ ಕೈಯಿಂದ ಮಾಡಿದ ರೊಟ್ಟಿಯಲ್ಲಿ ಯಾವ ರುಚಿ ಇರುತ್ತದೋ ಅದು ಎಂದೂ ಮುಗಿಯದ ಭಂಡಾರವಾಗಿದೆಯೋ ಅದೇ ರೀತಿ ಸಾವಿರಾರು ಗಿರಣಿಗಳು ಪ್ರಾರಂಭವಾದರೂ ಕೂಡ ನಮ್ಮವರೇ ಆದ ಸಹೋದರ-ಸಹೋದರಿಯರ ಕೈಯಿಂದ ತಯಾರಾದ ಬಟ್ಟೆಯಲ್ಲಿ ತನ್ನ ತನದ ಯಾವ ವಾಸನೆ ಇದೆಯೋ ಅದು ಎಂದು ಕಡಿಮೆಯಾಗಲು ಸಾಧ್ಯವಿಲ್ಲ." ಔದ್ಯೋಗಿಕ ಸಂಸ್ಕೃತಿಯ ಮೂಲಕ ಉತ್ಪಾದಿತ ಗೊಂಡ ಪದಾರ್ಥ ನಮ್ಮ ಬೇಡಿಕೆಗೆ ಅನುಸಾರ ಇರುವುದಿಲ್ಲ. ಆದರೆ ನಮ್ಮವರೇ ಆದ ಜನರಿಂದ ತಯಾರಾದ ಪದಾರ್ಥ ನಮ್ಮ ಸ್ವಂತದ ಅವಶ್ಯಕತೆಗಳಿಗೆ ಅನುಸಾರ ಇರಲು ಸಾಧ್ಯ. ಆದ್ದರಿಂದ ಮನುಷ್ಯ ಮನುಷ್ಯರಲ್ಲಿಯ ಸಂಬಂಧದ ಸಂಸ್ಕೃತಿಯ ಪ್ರತಿನಿಧಿತ್ವವನ್ನು ಖಾದಿ ಮಾಡುತ್ತದೆ. ಖಾದಿಯ ಒರಟುತನದಲ್ಲೂ ಕೂಡ ಸೌಂದರ್ಯವಿದೆ. ಈ ಮಾತನ್ನು ಗಾಂಧೀಜಿ ತುಂಬ ಸಹಜವಾಗಿ ಹೇಳುತ್ತಾರೆ. ಒಂದು ಕಡೆಗೆ ಹೀಗೆ ಬರೆದಿದ್ದಾರೆ. "ಒಳ್ಳೆಯ ಖಾದಿ ಬಹಳ ತುಟ್ಟಿ ಮತ್ತು ಸಾಧಾರಣ ಖಾದಿ ಕೀಳು ಎಂದು ಜನರು ಹೇಳುತ್ತಾರೆ." ಯಂತ್ರದಿಂದ ಮಾಡಿರುವ ಬಟ್ಟೆಯಲ್ಲಿ ಜೀವವಿಹೀನ ಸಮಾನತೆ ಇದ್ದರೂ ಅದರ ಅಭಾವ ಕೀಳೆಂದೆಲ್ಲ. ಬದಲಿಗೆ ಇದು ಜೀವನದ ಸೂಚಕ. ಯಾವ ರೀತಿ ಒಂದು ವೃಕ್ಷದ ಲಕ್ಷ-ಕೋಟಿ ಎಲೆಗಳಲ್ಲಿ ಪೂರ್ಣ ಪ್ರಮಾಣದ ಸಮಾನತೆಯ ಅಭಾವ ಕೀಳು ಮಟ್ಟದ ಗುರುತಲ್ಲವೊ ಆ

ರೀತಿ. ನಿಜಸಂಗತಿ ಏನೆಂದರೆ ಎಲೆಗಳಲ್ಲಿಯ ಅಸಮಾನತೆಯೇ ವೃಕ್ಷಕ್ಕೆ ಜೀವನ್ಮಯೀ ಶೋಭೆ ಕೊಡುತ್ತವೆ. ಯಂತ್ರದಿಂದ ತಯಾರಾದ ಯಾವುದಾದರೊಂದು ವೃಕ್ಷದ ಕಲ್ಪನೆ ಮಾಡಬಹುದು. ಅದರ ಎಲ್ಲ ಎಲೆಗಳು ಒಂದೇ ರೀತಿಯ ಆಕಾರದ್ದಾಗಿರುತ್ತದೆ. ಆದರೆ ಅದು ಬಹು ಭಯಾನಕ ಎಂದೆನಿಸುವುದು. ಖಾದಿಯ ಬೆಲೆಯ ಬಗ್ಗೆ ಹೇಳುವುದಾದರೆ ಅದು ಒಳ್ಳೆಯದಾಗಿರಲಿ ಅಥವಾ ಕೆಟ್ಟದಾಗಿರಲಿ, ನಮಗೇಕೆ ಚಿಂತೆ ಇರಬೇಕು? ಎಷ್ಟೇ ಬೆಲೆಯನ್ನು ಕೊಟ್ಟರೂ ಅದರ ಒಂದೊಂದು ಪೈಸೆಯೂ ಹಸಿವೆಯಿಂದ ಸಾಯುವಂಥ ಬಡ ಜನರಿಗೆ ದೊರೆಯುವುದು. ಎಲ್ಲಿ ಜನರು ಖಾದಿಯನ್ನು ಸ್ವೀಕಾರ ಮಾಡಿದ್ದಾರೋ ಅಲ್ಲಿ ಬಟ್ಟೆಯ ಬಗೆಗಿನ ವಿಷಯದಲ್ಲಿ ಜನರ ಅಭಿರುಚಿಯೇ ಬದಲಾಗಿ ಬಿಟ್ಟಿದೆ. ಮ್ಯಾಂಚೆಸ್ಟರ್‌ನಲ್ಲಿ ತಯಾರಾದ ಬಟ್ಟೆಯೊಂದಿಗೆ ಹೋಲಿಕೆ ಮಾಡಿದಾಗ ಖಾದಿ ಎರಡರಷ್ಟು ತುಟ್ಟಿಯೇ ಆಗಿರಬಹುದು, ಆದರೆ ಅನಾವಶ್ಯಕ ಮತ್ತು ಹೆಚ್ಚುವರಿ ಬಟ್ಟೆಯ ಖರೀದಿಯನ್ನು ತ್ಯಾಗ ಮಾಡುವುದರ ಮೂಲಕ ತುಟ್ಟಿಯ ಈ ಕ್ಷತಿ ಪೂರ್ತಿಯಾಗುವುದು.

– ಪ್ರದೀಪ್ ದೀಕ್ಷಿತ್

ಸಂತಾಪ...

ಸುಜನಾ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಪ್ರೊ.ಎಸ್.ನಾರಾಯಣಶೆಟ್ಟಿ ತಮ್ಮ ೮೦ನೇ ವಯಸ್ಸಿನಲ್ಲಿ ಕಳೆದ ಮೇ ೧೫ ರಂದು ನಿಧನರಾದರು. ಕನ್ನಡದ ವರಕವಿ ಪು.ತಿ.ನ.ರ ಅಭಿಮಾನಿಯಾಗಿದ್ದ ಸುಜನಾರವರು ಪು.ತಿ.ನ ಸಾಹಿತ್ಯದ ಅಧಿಕೃತ ವಕ್ತಾರರಾಗಿದ್ದರು. ಅವರ ಭಾಷಣಗಳಿಗೆ ಮಾರುಹೋಗದ ಯಾವುದೇ ಸಾಹಿತ್ಯ ಪ್ರೇಮಿ ಇರಲಿಲ್ಲ. 'ಯುಗಸಂಧ್ಯಾ' ಕಾವ್ಯ ಸುಜನಾರವರನ್ನು ಅಮರರನ್ನಾಗಿ ಮಾಡಿದೆ. ಸುಜನಾರವರಿಗೆ ಜನಪದ ವಿಚಾರವು ತನ್ನ ಹೃದಯ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.

* * *

ದೇಶದ ರೈತನಾಯಕ ಮತ್ತು ಭಾರತೀಯ ಕಿಸಾನ್ ಯೂನಿಯನ್ ಮುಖಂಡ ಮಹೇಂದ್ರ ಸಿಂಗ್ ಟಿಕಾಯತ್ ಮೇ ೧೫-೨೦೧೧ರಂದು ನಿಧನರಾದರು. ರೈತರ ಕಲ್ಯಾಣ ಮತ್ತು ಗ್ರಾಮೀಣ ಭಾರತದ ಬಗೆಗಿನ ಅವರ ಬದ್ಧತೆ ನಿಶ್ಚಲವಾಗಿತ್ತು. ಜೀವನ ಪರ್ಯಂತ ಟಿಕಾಯತ್‌ರವರು ರಾಜಕೀಯದ ಯಾವುದೇ ಆಕರ್ಷಣೆಗೆ ಮರುಳಾಗಿರಲಿಲ್ಲ. ಅವರ ಧೈರ್ಯ, ನಿಶ್ಚಿತ ಅಭಿಪ್ರಾಯ ಮತ್ತು ಸರಳತೆ ಅವರನ್ನು ಒಬ್ಬ ಅಸದೃಶ ನಾಯಕನನ್ನಾಗಿ ರೂಪಿಸಿತ್ತು. ಇಂಥ ಒಬ್ಬ ರೈತ ಮುಖಂಡನ ನಿಧನಕ್ಕೆ ಜನಪದ ವಿಚಾರ ತನ್ನ ಹೃದಯ ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಬಿ.ವಿ.ಸುರೇಶ್, ಶ್ರೀ ಎಂ.ಜಿ.ಶಿವರಾಮು,
ಶ್ರೀ ಹೆಚ್.ಎಸ್.ದೊರೆಸ್ವಾಮಿ – ಬೆಂಗಳೂರು
ಶ್ರೀ ನಾ.ಸು.ನಾಗೇಶ್– ನಾಗಮಂಗಲ
ಶ್ರೀ ವಿ.ಇ.ಲೋಕೇಶ್ – ಶ್ರೀ ಕಾಡೇನಹಳ್ಳಿ ನಾಗಣ್ಣಗೌಡರು – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಕೆ.ನಾಗಪ್ಪ – ಮದ್ದೂರು
ಶ್ರೀ ನಾಗಮಂಗಲ ಕೃಷ್ಣಮೂರ್ತಿ
ಶ್ರೀ ಬಿಂದುಮಾಧವ ವಡವಿ – ಮಂಡ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

560094

Left.

....

....

jANAPADA VICHARA

Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net

Printed at Sanketh, Mudrana, Melkote.